ಅಜಮಿಳ ಮೋಕ್ಷ

(ಯಕ್ಷಗಾನ ಪ್ರಸಂಗ)



- ಬಿ.ಕೆ. ಶ್ರೀಮತಿ ರಾವ್

ಅಜಮಿಳ ಮೋಕ್ಷ

(ಯಕ್ಷಗಾನ ಪ್ರಸಂಗ)

ಲೇಖಕಿ:
ಬಿ.ಕೆ. ಶ್ರೀಮತಿ ರಾವ್
(ಶ್ರೀ ಗುರುಪ್ರಿಯ ವಿಠಲದಾಸಿ)

ಶ್ರೀ ಗುರುಪ್ರಿಯ ಪ್ರಕಾಶನ
ಕಂಕನಾಡಿ, ಮಂಗಳೂರು – 575 002

ಅಜಮಿಳ ಮೋಕ್ಷ (ಯಕ್ಷಗಾನ ಪ್ರಸಂಗ)

ಲೇಖಕಿ ಮತ್ತು ಪ್ರಕಾಶಕಿ : ಬಿ.ಕೆ. ಶ್ರೀಮತಿ ರಾವ್ (ಶ್ರೀ ಗುರುಪ್ರಿಯ ವಿಠಲದಾಸಿ)
ಶ್ರೀ ಗುರುಪ್ರಿಯ ಪ್ರಕಾಶನ
ಕರಾವಳಿ ಟ್ರೇಡರ್ಸ್
ಕಪಿತಾನಿಯೊ ಶಾಲೆಯ ಬಳಿ
ಕಂಕನಾಡಿ, ಮಂಗಳೂರು – 575 002
ಮೊಬೈಲ್: 9880992370

ಮೊದಲ ಮುದ್ರಣ	: 2017
ಪ್ರತಿಗಳು	: 500
ಪುಟಗಳು	: 32+4
ಬೆಲೆ	: ರೂ. 40/–
ಹಕ್ಕು	: ಗ್ರಂಥಕರ್ತರದ್ದು

ರಕ್ಷಾಪುಟ ವಿನ್ಯಾಸ,
ಡಿ.ಟಿ.ಪಿ. ಮತ್ತು ಮುದ್ರಣ : ಪ್ರಿಂಟ್ ಡಿಸೈನ್ಸ್,
ಅಳಕೆ, ಮಂಗಳೂರು.
ದೂ.: 9844856895

॥ ಮುಕುಂದ ವಿಠಲಾಯನಮಃ ॥

ಸೇಸೆ ಮಾತು

ಇತ್ತೀಚೆಗೆ ಒಂದು ದೈನಂದಿನ ಪ್ರಕಟಣೆಯಲ್ಲಿ "ಕಲೆ / ಯಕ್ಷಗಾನ ಸ್ಪರ್ಧೆ ಯಕ್ಷೋತ್ಸವ-2017" ಶಿಕ್ಷಣ ಸಂಸ್ಥೆ ಸಂಸ್ಕೃತಿ ರಕ್ಷಣೆಯ ಮಂದಿರವಾಗಲಿ" ಎಂಬುದಾಗಿ ಕಟೀಲು ದೇವಸ್ಥಾನದ ಅನುವಂಶಿಕ ಅರ್ಚಕ ಹರಿನಾರಾಯಣದಾಸ ಆಸ್ರಣ್ಣ ಅವರು ಒಂದು ಉದ್ಘಾಟನಾ ಸಂದರ್ಭದಲ್ಲಿ ಯುವ ಪೀಳಿಗೆಯನ್ನು ಕುರಿತು ತುಳುನಾಡ ಸಂಸ್ಕೃತಿಯ ಹೆಮ್ಮೆಯ ಬಗ್ಗೆ ಒತ್ತಿ ಹೇಳಿದ್ದಾರೆ. ಈ ಮೂಲ ಸೆಲೆಯಿಂದಲೇ ಬಂದಿರ ತಕ್ಕಂಥ ಶ್ರೀ ಗುರುಪ್ರಿಯವಿಠಲಾಂಕಿತರಾದ ಬಿ.ಕೆ. ಶ್ರೀಮತಿ ರಾವ್‌ರವರು, (ಕಟೀಲು – ಶ್ರೀಮತಿ ರಾವ್‌ರವರ ಹುಟ್ಟೂರು) ಪ್ರಕಟಿಸಲಿಚ್ಛಿಸಿರುವ **ಅಜಮಿಳಮೋಕ್ಷ** (ಯಕ್ಷಗಾನ ಪ್ರಸಂಗ) ಅವರ 33ನೆಯ ಗ್ರಂಥವಾಗಿ ಹೊರಹೊಮ್ಮಿದೆ.

ಹರಿದಾಸ / ದಾಸಿಯರ ವಿಶೇಷಾನುಗ್ರಹಕ್ಕೂ ಪಾತ್ರರಾಗಿದ್ದಾರೆ ಎಂಬುದಕ್ಕೆ ಇವರ "ಹರಿದಾಸ ವಿಜಯ" ಎರಡನೇ ಆವೃತ್ತಿಯನ್ನು ಕಂಡಿದೆ.

ಬಿ.ಕೆ. ಶ್ರೀಮತಿಯವರ "ಅಜಮಿಳ ಮೋಕ್ಷ" (ಯಕ್ಷಗಾನ ಪ್ರಸಂಗ) ಗ್ರಂಥವು ಸಂಸ್ಕೃತಿ ರಕ್ಷಣೆಯ ಮಂದಿರವಾಗುವುದಕ್ಕೆ ಎಲ್ಲಾ ಕರ್ನಾಟಕ ಗ್ರಂಥಾಲಯದಲ್ಲಿಯೂ ಹಾಗೂ ಅಭಿಮಾನಿಗಳಲ್ಲಿಯೂ ಪ್ರತಿಗಳು ಇದ್ದಲ್ಲಿ ಅದರ ಸಾರ್ಥಕತೆಯು ಉಂಟಾಗುತ್ತದೆ.

ಈ ನಿಟ್ಟಿನಲ್ಲಿ ಸಂಘ ಸಂಸ್ಥೆಗಳು ಉತ್ತೇಜನಕಾರಿಯಾಗಿ ಕೆಲಸಮಾಡಬೇಕಾಗಿದೆ.

ಶ್ರೀಗುರುಪ್ರಿಯವಿಠಲದಾಸಿಯವರಿಗೆ ವಾಸುಕೀಶಯನವಿಠಲಾತ್ಮಕ ಮುಕುಂದವಿಠಲನು ವಿಶೇಷಾನುಗ್ರಹವನ್ನು ಮಾಡಲಿ ಎಂದು ಈ ಮೂಲಕ ಪ್ರಾರ್ಥಿಸುತ್ತೇನೆ.

25-02-2017
ಸುರತ್ಕಲ್

ಎಂ.ಜಿ. ಮಾಧವ ರಾವ್

ಶುಭಾಶೀರ್ವಾದಗಳು

ಹರಿದಾಸ ಸಾಹಿತ್ಯದಲ್ಲಿ ಕೀರ್ತನೆಗಳು, ಸುಳಾದಿಗಳು, ಉಗಾಭೋಗಗಳು, ಮುಂಡಿಗೆಗಳು ಚೂರ್ಣಿಕೆಗಳು, ದಂಡಕ ಹೀಗೆ ಹತ್ತು ಹಲವು ಪ್ರಕಾರಗಳಿವೆ. ಅದರಲ್ಲಿ ಈ ಯಕ್ಷಗಾನ ಪ್ರಸಂಗಗಳೂ ಒಂದು. ತಿಪ್ಪಣ್ಣಾಚಾರ್ಯರು – ಹನುಮದ್ವಿಲಾಸ, ಕುಚೇಲೋಪಾಖ್ಯಾನ ಮುಂತಾದ ಯಕ್ಷಗಾನಗಳನ್ನು ರಚಿಸಿರುವುದು ಹರಿದಾಸ ಸಾಹಿತ್ಯದಲ್ಲಿ ಉಂಟು. ಅಂತೆಯೇ ಈ ಅಜಾಮಿಳನ ಉಪಾಖ್ಯಾನ ಶುಕಾಚಾರ್ಯರು ಪರೀಕ್ಷಿತ್ರಾಜನ ಸಂವಾದ ರೂಪದಲ್ಲಿ ಶ್ರೀಮದ್ಭಾಗವತ ಆರನೇ ಸ್ಕಂಧದಲ್ಲಿ ಬರುತ್ತದೆ.

ನಾಮ್ನೋಸ್ತಿ ಯಾವತೀಶಕ್ತಿಃ ಪಾಪ ನಿರ್ಹರಣೇ ಹರೇಃ
ತಾವತ್ಕರ್ತುಂ ನ ಶಕ್ನೋತಿ ಪಾತಕಂ ಪಾತಕೀ ಜನಃ ॥

ಹರಿಯ ನಾಮವು ಎಷ್ಟು ಪಾಪಗಳನ್ನು ನಾಶ ಮಾಡುತ್ತದೆಯೆಂದರೆ ಅಷ್ಟು ಪಾಪಗಳನ್ನು ನಾವು ಮಾಡಲೂ ಸಾಧ್ಯವಿಲ್ಲ ಎಂಬ ವಾಣಿಗೆ ದೃಷ್ಟಾಂತವಾಗಿ ಅಜಾಮಿಳನ ಉಪಾಖ್ಯಾನವನ್ನು ತಿಳಿಸುತ್ತಾರೆ. ಮಕ್ಕಳಿಗೆ ದೇವರ ಹೆಸರು ಇಟ್ಟರೆ ಏನು ಲಾಭ ಎಂದು ಇಲ್ಲಿ ಅರಿವಾಗುತ್ತದೆ. ಅಜಾಮಿಳ ಮಗನನ್ನು ನಾರಾಯಣ ಎಂದು ಕರೆಯಲು ಪ್ರಯತ್ನಿಸಿದ. ಆದರೂ ಹರಿನಾಮ ಸ್ಮರಣೆ ಅಣಕದಿಂದ, ಡಂಭದಿಂದ, ಎದ್ದಾಗ ಬಿದ್ದಾಗ ಮಾಡಿದರೂ ಅದರ ಕಾರ್ಯವನ್ನು ಅದು ಮಾಡುತ್ತದೆ. ಪಾಪಗಳು ಎಂಬ ಹತ್ತಿಯ ರಾಶಿ ಹರಿನಾಮದ ಕಿಡಿಯಿಂದ ಸುಟ್ಟು ಭಸ್ಮವಾಗುತ್ತದೆ. ವಾನರರು ಸೇತುವೆ ಕಟ್ಟುವಾಗ ರಾಮ ರಾಮ ಎಂಬ ನಾಮ ಬರೆದ ಬಂಡೆಗಳು ತೇಲಿದವು ಎಂದು ಕೇಳುತ್ತೇವೆ. ಅಂತೆಯೇ ಕರಿರಾಜ "ನಾರಾಯಣ ಅಖಿಲಗುರೋ ನಮಸ್ತೇ" ಎಂದಾಗ ಶ್ರೀಹರಿ ಆ ನೆಗಳೆಯ ಬಂಧನದಿಂದ ಆನೆಯನ್ನು ಬಿಡಿಸಿದ. ದ್ರೌಪದಾದೇವಿ "ಹಾ ಕೃಷ್ಣಾ ದ್ವಾರಕಾವಾಸ" ಎಂದಾಗ ಕೃಷ್ಣ ಅಕ್ಷಯಾಂಬರವನಿತ್ತ. ಇಂತಹ ಹರಿನಾಮದ ಮಹಿಮೆಯ ಪ್ರಸಂಗವನ್ನು ಯಕ್ಷಗಾನ ರೂಪದಲ್ಲಿ ದೃಶ್ಯದ ಮೂಲಕ ತೋರಲು ಅನುಕೂಲವಾಗುವಂತೆ ಹರಿದಾಸ ವಾಣಿಯಲ್ಲಿ ನಮ್ಮ ಶಿಷ್ಯೆಯಾದ ಬಿ.ಕೆ. ಶ್ರೀಮತಿ ರಾವ್ ರಚಿಸಿದ್ದಾರೆ. ಈಗಾಗಲೇ ಕೃಷಿ ಮಾಡಿ ಹತ್ತು ಹಲವು ಹರಿದಾಸ ಹರಿದಾಸಿಯರ ಚರಿತ್ರೆ ಸಂಗ್ರಹಿಸಿ ಪ್ರಕಟಿಸಿದ್ದಾರೆ. ಕನ್ನಡ ಮತ್ತು ತುಳುಭಾಷೆಯಲ್ಲಿ ಕೀರ್ತನೆಗಳನ್ನು ರಚಿಸಿ ಪ್ರಕಟಿಸಿದ್ದಾರೆ. ಇದೀಗ ಈ ಕೃತಿಯು ಪದ್ಯರೂಪದಲ್ಲಿ ಸಂವಾದ ಶೈಲಿಯಲ್ಲಿ ರಚಿಸಿರುವ, ಕೃತಿ ಚಿಕ್ಕದಾದರೂ ಚೊಕ್ಕದಾಗಿದೆ. ಮುಖ್ಯ ವಿಚಾರಗಳನ್ನು ಬಿಡದೆ ತಿಳಿಸಿದ್ದಾರೆ. ಶಾಲೆಯಲ್ಲಿರುವ ಸಣ್ಣ ಮಕ್ಕಳೂ ಸಹ ಸಂಭಾಷಣೆಯನ್ನು ನಾಟಕ ಆಡಬಹುದಾಗಿದೆ. ಇವರಿಂದ ಇಂತಹ ಹತ್ತು ಹಲವಾರು ಕೃತಿಗಳು ಹೊರಬರಲಿ ಎಂದು ಹಾರೈಸುತ್ತ ನಮ್ಮ ಗುರುಗಳ ಅಂತರ್ಯಾಮಿ, ವರಾಹ ಹರಿ ವಿಠಲಾಭಿನ್ನ ಗುರುಪ್ರಿಯವಿಠ್ಠಲ ಸಕಲ ಸನ್ಮಂಗಳವನ್ನುಂಟು ಮಾಡಲಿ ಎಂದು ಪ್ರಾರ್ಥಿಸುತ್ತೇನೆ.

ವರಾಹ ಹರಿ ವಿಠಲದಾಸರು
ಮಂಡ್ಯ

ಸವಿನುಡಿ

ಶ್ರೀಮತಿ ಬಿ.ಕೆ. ಶ್ರೀಮತಿ ರಾವ್ ತಮ್ಮ ಸಾಧನೆಗಳಿಂದ ೩೩ ಕೃತಿಗಳನ್ನು ಬಿಡುಗಡೆ ಮಾಡಿ ಕೃತಾರ್ಥರಾಗಿದ್ದಾರೆ. 'ಶ್ರೀಗುರುಪ್ರಿಯವಿಠಲಾ'ಂಕಿತರಾದ ಇವರು ಅಭಿನಂದನೀಯರು. ತಮ್ಮ ಗುರುಗಳಾದ ಮಾನ್ಯ ಮುಕುಂದ ವಿಠಲದಾಸರ ಪೂರ್ಣಾಶೀರ್ವಾದದಿಂದ ಹಂತ ಹಂತವಾಗಿ ಏರುತ್ತಿದ್ದಾರೆ. ಕನ್ನಡ, ತುಳು ಬಾಷೆಗಳಲ್ಲಿ ಭಕ್ತಿಮಾರ್ಗದ ಹಲವು ಕೃತಿ ರಚಿಸಿದವರು, ಇದೀಗ ಯಕ್ಷಗಾನ ಕ್ಷೇತ್ರಕ್ಕೂ ಕೊಡುಗೆ ನೀಡುತ್ತಿದ್ದಾರೆ. ಹೆಣ್ಣು ಮಕ್ಕಳ ವಿದ್ಯಾಸಂಸ್ಥೆಯಲ್ಲಿ ಮುಖ್ಯ ಅಧೀಕ್ಷಕರಾಗಿ ಸೇವೆ ಸಲ್ಲಿಸಿ ಎಲ್ಲರ ಮನ ಗೆದ್ದ ಇವರು ಹೊತ್ತಗೆಗಳನ್ನು ರಚಿಸುತ್ತಾ ಜನರಿಗೆ ಮುದವನ್ನು ನೀಡುತ್ತಿದ್ದಾರೆ. ಸದಾ ನಿರ್ಮಲ ಚಿತ್ತರಾಗಿ, ಯಾವುದೇ ಫಲಾಪೇಕ್ಷೆಯನ್ನು ಇರಿಸದೆ, ಲೋಕಾರ್ಪಣೆ ಮಾಡುವ ಇವರ ಕೃತಿಗಳು ಅತ್ಯುನ್ನತವಾಗಿದೆ. ವಿದ್ಯಾ ಸಂಸ್ಥೆಗಳಲ್ಲಿ ಅಭ್ಯಾಸಿಸುವವರಿಗೆ ಇವರ ಕೃತಿಗಳು ಪೂರಕ-ಪ್ರೇರಕವಾಗಿರುತ್ತದೆ. ಮೌಲ್ಯಧಾರಿತ ಜೀವನವನ್ನು ಮಾಡಲು ಮತ್ತು ನಮ್ಮ ಜೀವನದ ಹಾದಿ ಸುಗಮವಾಗಿ, ಸುಲಲಿತವಾಗಿ ಮುಂದುವರಿಯಲು ಇವರ ಕೃತಿಗಳು ದಾರಿದೀಪವಾಗಿದೆ. ಉತ್ತಮ ಗುಣಮಟ್ಟದ ಪದಗಳ ಜೋಡಣೆ, ಸುಂದರ ಭರಿತವಾದ ಸಾಹಿತ್ಯ, ಸತ್ತ್ರಜೆಗಳನ್ನು ರೂಪಿಸುವ ನೀತಿ – ಬೋಧನೆಗಳನ್ನು ಪುಸ್ತಕದಲ್ಲಿ ಜೋಡಿಸಿಕೊಂಡಿದ್ದಾರೆ. ಸರ್ವರಿಗೂ ಹಿತವಾದ ಕಿವಿ ಮಾತುಗಳು ಇವರ ರಚನೆಯಲ್ಲಿದೆ. ಜನ ಸಾಮಾನ್ಯರಿಗೆ ಅರ್ಥೈಸಿಕೊಳ್ಳುವ ವ್ಯವಸ್ಥೆ, ಆಕರ್ಷಣೀಯವಾದ ಸರಣಿ ಮತ್ತು ಚೆಲುವಾದ ಮುದ್ರಣ ಇದರ ಬಗ್ಗೆ ಕಾಳಜಿ ವಹಿಸಿ ರಚಿಸುವ ಶೈಲಿ ಅವರದಾಗಿದೆ.

ಇವರಿಂದ ಇನ್ನೂ ಅನೇಕ ವಿವಿಧ ವಿಭಾಗಗಳಿಗೆ ಸಂಬಂಧಪಟ್ಟ ಕೃತಿಗಳು ಮೂಡಿ ಬರಲಿ. ಇವರ ಪ್ರೇರಣೆಯಿಂದ ಇನ್ನೂ ಹಲವು ಜನ ಪ್ರೇರಿತರಾಗಿ ಹತ್ತಾರು ಹೊತ್ತಗೆಗಳು, ಮುದ್ರಣವಾಗಲಿ ಎಂದು ಶುಭ ಹಾರೈಸುತ್ತೇನೆ.

ಇವರ ಎಲ್ಲಾ ಪ್ರಕಟಿತ ಕಾರ್ಯಕ್ರಮದಲ್ಲಿ ಭಾಗವಹಿಸಿದ ಸಂತೋಷ ನನಗಿದೆ. ಪ್ರತಿಯೊಂದು ಪ್ರಗತಿಯ ದಾರಿಯನ್ನು ಕಂಡು ಹರ್ಷಗೊಂಡಿದ್ದೇನೆ. ಜನ ಸಾಮಾನ್ಯರ ಮೇಲೆ ಇವರ ಉದಾರತೆಯನ್ನು ಕಂಡು ಬೆರಗಾಗಿದ್ದೇನೆ. ಇವರ ಕಷ್ಟ ಕಾರ್ಪಣ್ಯಗಳಲ್ಲಿ ಸ್ಪಂದಿಸಿದ್ದೇನೆ. ಉತ್ತಮ ಆರೋಗ್ಯ, ನೆಮ್ಮದಿ, ಶಾಂತಿ ಸದಾ ಇವರ ಬಳಿ ಇರಲಿ ಎಂದು ಬಯಸುತ್ತೇನೆ.

ಸುಧಾಕರ ರಾವ್ ಪೇಜಾವರ

ಪ್ರಧಾನ ಕಾರ್ಯದರ್ಶಿ

ಶ್ರೀ ಕೃಷ್ಣ ಯಕ್ಷ ಸಭಾ, ಕದ್ರಿ, ಮಂಗಳೂರು.

ಮುದದಿಂದ ಕೊಂಡಾಡುವೆ

ಯಕ್ಷಗಾನ ಕಾವ್ಯ ಪ್ರಪಂಚದಲ್ಲಿ ಕವಯತ್ರಿಯರ ಸಂಖ್ಯೆ ಹೆಚ್ಚಿಲ್ಲ. ಗಣಪಕ್ಕ ಸಣ್ಣಭಡ್ತಿ, ಮಹಾಲಕ್ಷ್ಮೀ ಜೋಯಿಸ, ಕಿಬ್ಬಚ್ಚಲು ಮಂಜಮ್ಮ ಮುಂತಾದ ಬೆರಳೆಣಿಕೆಯ ಮಹಿಳೆಯರಷ್ಟೆ ಇಲ್ಲಿ ತಮ್ಮ ಪ್ರತಿಭೆಯನ್ನು ಮೆರೆದಿದ್ದಾರೆ. ಈ ಹಿನ್ನೆಲೆಯಲ್ಲಿ ಇದೀಗ ತಾನೇ "ಅಜಮಿಳ ಮೋಕ್ಷ" ಪ್ರಸಂಗವನ್ನು ರಚಿಸಿ ಭರವಸೆಯ ಬೆಳಕುಬೀರಿದ 'ಶ್ರೀ ಗುರುಪ್ರಿಯ ವಿಠಲದಾಸಿ' ಅಂಕಿತದ ಶ್ರೀಮತಿ ಬಿ.ಕೆ. ಶ್ರೀಮತಿ ರಾವ್ ಅವರ ಪ್ರಯತ್ನ ಶ್ಲಾಘನೀಯವಾದುದು. ಈ ಕಾವ್ಯಯೋಗಸಾಧನೆಗಾಗಿ ಮೊದಲು ನಾನು ಅವರನ್ನು ಹಾರ್ದಿಕವಾಗಿ ಅಭಿನಂದಿಸುತ್ತೇನೆ.

'ಅಜಮಿಳ ಮೋಕ್ಷ' ಪ್ರಸಂಗವು 85 ಪದ್ಯಗಳ ಪುಟ್ಟ ಸಂಕಲನ. ಹರಿನಾಮ ಮಹಿಮೆಯನ್ನು ಸಾರುವ ಚಿಕ್ಕದಾದರೂ ಚೊಕ್ಕಪ್ರಸಂಗ. ನಾರಾಯಣ ನಾಮ ಸಂಕೀರ್ತನೆಯನ್ನು 'ನಾರಗ'ವೆಂದಷ್ಟೇ ಹೇಳಿದರೂ ಅದರ ಮಹಿಮಾತಿಶಯಕ್ಕೆ ಲೋಪವಿಲ್ಲದಂತೆಯೇ, ಈ ಕೃತಿಯು ಕಿರಿದಾಗಿದ್ದರೂ ಅದರ ಗುಣಾತಿಶಯವು ಹಿರಿದಾದುದೇ ಎಂದು ಹೇಳಬಹುದು. ವೈಕುಂಠದಲ್ಲಿ ಲಕ್ಷ್ಮೀ – ನಾರಾಯಣರ ಸಂವಾದ, ನಾರದರಿಗೆ ಹರಿನಾಮ ಪ್ರಸಾರದ ಬೋಧೆ, ಭೂಲೋಕದಲ್ಲಿ ಅಜಮಿಳನೆಂಬ ಬ್ರಾಹ್ಮಣನ ವನವಿಹಾರ, ವೇಶ್ಯಾಮೋಹ, ವೃದ್ಧಾಪ್ಯದಲ್ಲಿ 'ನಾರಗ'ನೆಂಬ ನಾಮೋಚ್ಚಾರ, ಮರಣ, ಯಮಧರ್ಮನಿಗೆ ಚಿತ್ರಗುಪ್ತನಿಂದ ವಿವರ ನೀಡಿಕೆ, ನರಕಶಿಕ್ಷೆಯ ಘೋಷಣೆ, ವಿಷ್ಣುದೂತ – ಯಮದೂತರ ಸಂಘರ್ಷ, ವಿಷ್ಣುದೂತರ ಪಾರಮ್ಯ, ಅಜಮಿಳನಿಂದ ಹರಿಸ್ತುತಿ, ವೈಕುಂಠ ಪ್ರಾಪ್ತಿ ಇಷ್ಟೇ ಇಲ್ಲಿಯ ದೃಶ್ಯಲೋಕ. ಅಗತ್ಯಕ್ಕೆ ಬೇಕಾದಷ್ಟೇ ಪದ್ಯಗಳ ರಚನೆ. ಸುಮಾರು ಎರಡು ಗಂಟೆಗಳ ಕಾಲಾವಧಿಯಲ್ಲಿ ತೆರೆದುಕೊಳ್ಳಬಹುದಾದ ಸುಂದರ ಕಥಾಭಿತ್ತಿ. ಸಂವಾದ, ವರ್ಣನೆ, ಯುದ್ಧ, ಭಕ್ತಿ ಹೀಗೆ ವಿಭಿನ್ನಪಾತಳಿಗಳಲ್ಲಿ ಅರಳುವ ಕಲಾಕುಸುಮ.

ನಾಟ–ಝಂಪೆ, ಸುರುಟಿ–ಏಕ, ಸೌರಾಷ್ಟ್ರ–ತ್ರಿವುಡೆ, ಕಾಂಭೋದಿ–ಝಂಪೆ, ಕಾಪಿ–ಅಷ್ಟ, ಮಾರವಿ–ಏಕ, ಕೇದಾರಗೌಳ–ಅಷ್ಟ, ಶಂಕರಾಭರಣ–ಮಟ್ಟೆ, ಸಾಂಗತ್ಯ–ರೂಪಕ, ಭಾಮಿನಿ, ವಾರ್ಧಕ, ಕಂದ ಮುಂತಾದ ಪ್ರಸಿದ್ಧ ಯಕ್ಷಗಾನ ಛಂದೋಬಂಧಗಳಿಂದಲೇ ಹೆಣೆದ ಈ ಕೃತಿ ಅಭ್ಯಾಸಿಗಳಿಗೆ ಹೇಳಿ ಮಾಡಿಸಿದಂತಿದೆ. ಶಾರ್ದೂಲ ವಿಕ್ರೀಡಿತದ ಅಕ್ಷರ ಛಂದಸ್ಸು, ಉಳಿದಂತೆ ಮಾತ್ರಾ ಮತ್ತು ಅಂಶಛಂದಸ್ಸು, ಅಂಶ ಮಾತ್ರಾಮಿಶ್ರಣಗಳ ನಡುವೆ ಹಿತಮಿತವಾದ ಇತ್ತೀಚೆಗೆ ಬಳಕೆ ತಪ್ಪಿದ ವಚನಗಳ ವಚೋವಿಲಾಸ ಇತ್ಯಾದಿ ಯಕ್ಷಗಾನ ಪ್ರಬಂಧ ಸ್ವರೂಪಕ್ಕೆ ಮಾದರಿಯಂತಿದೆ. ಇದು

ಲೇಖಕಿಯ ಮೊದಲ ಕೃತಿಯಾಗಿದ್ದೂ, ಅಲ್ಲಲ್ಲಿ ಸಹೃದಯರ ಮನಸ್ಸನ್ನು ಸೆಳೆಯುವ ಕಮನೀಯ ಗುಣಗಳಿವೆ ಎಂಬುದು ಗಮನಾರ್ಹ. **ಉದಾಹರಣೆಗೆ :**

"ಬೆದರದಿರೆಲೆ ರಮಣಿ-ರಮಾಮಣಿ-ಹೃದಯ ಸನ್ನಿಭ ಹರಿಣಿ" (ಪುಟ-5) "ಬಾಳಿನ ಬವಣೆಯನ್ನಳಿಸು-ಜೀವ – ಜಾಲ ಸಂಗ್ರಹಿಸಲಿ ಪುಣ್ಯದ ಬೆಳಸು" (ಪುಟ-6), "ಚಂದಿರಾನನೆ ಚೆಲ್ವೆ ರಮಣೀಯ ರಂಭೆ" (ಪುಟ-9) ಮುಂತಾದ ರಚನೆಗಳಲ್ಲಿ ಸುಕುಮಾರ ಸೌಂದರ್ಯವಿದೆ. ಆದಿಪ್ರಾಸ ಮತ್ತು ಅಂತ್ಯಪ್ರಾಸಗಳ ಚೆಲುವಿದೆ. ವರಣಗಳ ಆಭರಣವಿದೆ; ವಳಿಗಳ ಅಲಂಕರಣವಿದೆ. ಸಂವಾದ ಭಾಗಗಳಲ್ಲಿ ಮೂಡಿನಿಂತ ಭಾವಬಂಧುರತೆ ಗೇಯತೆಯಲ್ಲಿ ಪರಿಣಾಮಕಾರಿಯಾಗುತ್ತದೆ ಎಂಬುದರಲ್ಲಿ ಸಂದೇಹವಿಲ್ಲ. **ಉದಾಹರಣೆಗೆ : –**

ದ್ವಿಜರ ಕುಲದಿ ಜನಿಸಿಹೆನು । ಕೇಳೆ ಚಂದ್ರಿಕೆ
ಯಜನ ಪರಿಕರಗಳನೊಯ್ಯೆ । ಬಂದೆ ವಿಪಿನಕೆ
ಅಜಮಿಳ ನಾಮಕನು ನಾನು । ಏಕೆ ನಾಚಿಕೆ
ನಿಜವ ನುಡಿವೆ ಮೋಹಗೊಂಡೆ । ಬಾರೆ ಸನಿಹಕೆ ॥

ಮೇಲು ವರ್ಗದವನು ನೀನು । ನುಡಿಯದೀ ತೆರ
ಕೀಳುಕುಲದ ಎನ್ನಮೋಹ । ಬಿಡು ಬಿಡಾತುರ
ಹಾಳುಮನಕೆ ಸೋಲಬೇಡ । ಪಾಪ ಭೀಕರ
ಬಾಳು ನರಕ ಖಚಿತವಹುದು । ತಿಳಿಯೊ ದ್ವಿಜವರ ॥ (ಪುಟ – 10)

ಈ ಕವಯತ್ರಿ ಈಗಾಗಲೇ ಅನೇಕ ಕೀರ್ತನೆಗಳನ್ನೂ ರಚಿಸಿದವರು. ದಾಸವಾಙ್ಮಯದ ಕುರಿತಾಗಿ ಅನೇಕ ಮೌಲಿಕ ಕೃತಿಗಳನ್ನು ಪ್ರಕಟಿಸಿದವರು. ಸಹಜವಾಗಿಯೇ ದಾಸವರೇಣ್ಯರ ರಚನೆಗಳಲ್ಲಿ ಕಾಣುವ ಲಯಪ್ರತೀತಿ ಇಲ್ಲಿಯೂ ಕಂಡು ಬರುತ್ತದೆ. "ಮುಟ್ಟದಿರಿ ಮುಟ್ಟದಿರಿ ಮುರಹರನ ಸ್ಮರಿಪರನು", "ಎಚ್ಚರಗೊಳಲಿಲ್ಲಾ – ದುರಾಸೆಲಿ – ಹುಚ್ಚನಾದೆನಲ್ಲಾ" ಮುಂತಾದ ಸಾಲುಗಳು ದಾಸಸಾಹಿತ್ಯದ ಪ್ರಭಾವ ಪ್ರೇರಣೆಗೆ ಸಾಕ್ಷಿಯಾಗಿವೆ. ಮುಂದಿನ ದಿನಗಳಲ್ಲಿ ಇವರು ವೈವಿಧ್ಯ ಪೂರ್ಣವಾದ ಇನ್ನಷ್ಟು ಛಂದೋಬಂಧಗಳನ್ನು ಬಳಸಿಕೊಂಡು, ಪೌರಾಣಿಕ ಆಖ್ಯಾನಗಳಿಗೆ ನೂತನ ದೃಷ್ಟಿಧೋರಣೆಗಳನ್ನು ನೀಡಿ, ಪೂರ್ಣಪ್ರಮಾಣದ ಮೌಲಿಕ ಪ್ರಸಂಗಗಳನ್ನು ರಚಿಸುವಂತಾಗಲಿ ಎಂದು ಹಾರೈಸುತ್ತೇನೆ. ಈ ಕೃತಿಯು ರಂಗದಲ್ಲಿಯೂ ಯಶಸ್ವಿಯಾಗಿ ಪ್ರದರ್ಶನಗೊಳ್ಳಲಿ ಎಂದು ಕಲಾಮಾತೆಯಲ್ಲಿ ಪ್ರಾರ್ಥಿಸುತ್ತೇನೆ.

– ಡಾ. ಕಬ್ಬಿನಾಲೆ ವಸಂತ ಭಾರದ್ವಾಜ

ನಿವೇದನೆ

॥ ಶ್ರೀ ಗುರುಭ್ಯೋ ನಮಃ ॥

ನಮಃ ಶ್ರೀಪಾದರಾಜಾಯ । ನಮಸ್ತೇ ವ್ಯಾಸಯೋಗಿನೇ ।
ನಮಃ ಪುರಂದರಾರ್ಯಾಯ । ವಿಜಯಾರ್ಯತೇ ನಮಃ ॥

****

ಮುದದಿಂದ ನಿನ್ನ ಕೊಂಡಾಡುವೆನು ಅನವರತ
ಮದವೂರ ವಿಘ್ನೇಶ ದೇವ ಜಗದೀಶ ॥

****

ದಕ್ಷಿಣ ಕನ್ನಡ ಜಿಲ್ಲೆಯ ಪುಣ್ಯಕ್ಷೇತ್ರವೆನಿಸಿದೆ ಕಟೀಲು. ಇದುವೇ ನನ್ನ ಹುಟ್ಟೂರು. ಕಟೀಲು ಕ್ಷೇತ್ರವು ಯಕ್ಷಗಾನ ಕಲೆಗೆ ತವರೂರು. ಇಲ್ಲಿ ಹುಟ್ಟಿ ಬೆಳೆದ ನನಗೆ ಯಕ್ಷಗಾನವೆಂದರೆ ಪಂಚಪ್ರಾಣ. ಚಿಕ್ಕಂದಿನಿಂದಲೇ ತಪ್ಪದೆ ಬಯಲಾಟಗಳನ್ನು ನೋಡಿ, ಪೌರಾಣಿಕ ಕಥೆಗಳನ್ನು ಮನನ ಮಾಡಿಕೊಂಡಿರುವುದರಿಂದಲೋ ಎಂಬಂತೆ, ಆಧ್ಯಾತ್ಮಿಕ ಸಾಧನೆಗೆ ಭದ್ರ ಬುನಾದಿಯಾಗಿ, ಶ್ರೀ ಹರಿಗುರುಗಳ ಅನುಗ್ರಹದಿಂದ ಇಂದು ಹರಿದಾಸಿಯಾಗಿ, ಲೇಖಕಿಯಾಗಿ, ಕೃತಿಗಳನ್ನು ರಚಿಸಿ, ಪ್ರಕಟಿಸುವಲ್ಲಿ ಯಶಸ್ವಿಯಾಯಿತೆನ್ನಬಹುದು.

ಸುಮಾರು ಮೂವತ್ತೆರಡು ಕೃತಿಗಳನ್ನು ಬರೆದು ಪ್ರಕಟಿಸಿದರೂ, ಆ ಪರಮಾತ್ಮನಿಗೆ ಸಂತೃಪ್ತಿಯಾಗಿಲ್ಲವೋ ಏನೋ! ಅಂತೂ ಈ ಮದಡಳಿಂದ 'ಯಕ್ಷಗಾನ ಪ್ರಸಂಗ'ದ ಕೃತಿಯನ್ನೂ ರಚಿಸಿ, ಪ್ರಕಟಿಸುವಂತೆ, ನನ್ನನ್ನು ಪ್ರೇರೇಪಿಸಿ, ಇಂದು, **'ಅಜಮಿಳ ಮೋಕ್ಷ'** ಎಂಬ ಈ ಯಕ್ಷಗಾನ ಪ್ರಸಂಗ ಕೃತಿಗೆ ಆತನೇ ಕಾರಣ ಕರ್ತನಾದ!

ಶ್ರೀ ಹರಿ ಪ್ರೇರಣೆಯಿಂದ ಪ್ರಥಮ ಪ್ರಯತ್ನವಾಗಿ ಚಿಕ್ಕದೊಂದು ಪ್ರಸಂಗವನ್ನು ಭಾಗವತ ಪುರಾಣದಿಂದ ಆಯ್ಕೆ ಮಾಡಿಕೊಂಡೆ. ನನ್ನಲ್ಲಿರುವ ಹಲವಾರು ಹಿರಿಯರ ಯಕ್ಷಗಾನ ಪ್ರಸಂಗಗಳನ್ನೆಲ್ಲಾ ಅವಲೋಕಿಸಿ, ಕೊನೆಗೆ ಮೈಸೂರಿನ ಡಾ। ಕಬ್ಬಿನಾಲೆ ವಸಂತ ಭಾರದ್ವಾಜರ ಮಾರ್ಗದರ್ಶನದಂತೆ, ಅವರು ರಚಿಸಿದ "ಯಕ್ಷಗಾನ ಛಂದಸ್ಸು" ಎಂಬ ಗ್ರಂಥದ ಅಧ್ಯಯನದೊಂದಿಗೆ ಪ್ರಸಂಗ ರಚನೆಗೆ ಪ್ರಾರಂಭಿಸಿದೆ. ಅಂತೂ ಗರುಡನಷ್ಟು ವೇಗವಾಗಿ ಹಾರಲಾಗದಿದ್ದರೂ, ಗುಬ್ಬಚ್ಚಿಯಂತಾದರೂ ಹಾರುವಲ್ಲಿ, ಶ್ರೀ ಕಬ್ಬಿನಾಲೆಯವರ ಪ್ರೋತ್ಸಾಹ ಹಾಗೂ ಮಾರ್ಗದರ್ಶನದಿಂದ ಬರೆದ ಮೇಲೆ, ಅವರಿಂದಲೇ ಅದನ್ನು ಪರಿಶೀಲಿಸಿ, ಪರಿಷ್ಕರಿಸಿ, ಅವರ ಅನುಗ್ರಹದೊಂದಿಗೆ ಇಂದು **'ಅಜಮಿಳ ಮೋಕ್ಷ'** – ಕೃತಿ ಪ್ರಕಟಣೆಗೆ ಸಿದ್ಧವಾಯಿತೆನ್ನಬಹುದು. ಶ್ರೇಷ್ಠ ಸಾಹಿತಿಗಳಾದ ಡಾ। ಕಬ್ಬಿನಾಲೆಯವರು, ನನ್ನಂತಹ ಸಾಮಾನ್ಯಳಾದವಳಿಗೆ ಪ್ರೋತ್ಸಾಹಿಸುವ ದೃಷ್ಟಿಯಲ್ಲಿ

ಅದೊಂದು ದಿನ ನಮ್ಮ ಮನೆಗೂ ಬಂದು, ಎರಡುಗಂಟೆಗಳಷ್ಟು ಕಾಲ ನನಗೆ ಛಂದಸ್ಸಿನ ಬಗ್ಗೆ ಪಾಠವನ್ನೂ ತಿಳಿಸಿ ಹೇಳಿದ ವ್ಯಕ್ತಿ ಎನ್ನುವಲ್ಲಿ, ಅವರ ಸರಳತೆ, ಹಾಗೂ ಕಲಿಯ ಬೇಕೆನ್ನುವವರಿಗೆ ಕಲಿಸುವ ಕಾಳಜಿ ಎಷ್ಟಿತ್ತೆಂಬುದು ಎದ್ದು ಕಾಣುತ್ತದೆ!

ಇಷ್ಟು ಮಾತ್ರವಲ್ಲದೆ, ಕೃತಿಯನ್ನು ಪರಾಮರ್ಶಿಸಿ, ನನ್ನ ಕೋರಿಕೆಯಂತೆ ಕೃತಿಗೆ ಮುನ್ನುಡಿಯ ಕಳಶದೊಂದಿಗೆ ಅಲಂಕರಿಸಿ, ಪ್ರಕಟಿಸಿ – ಪ್ರದರ್ಶಿಸಲು ಉತ್ತೇಜಿಸಿದರು. ಅವರಿಗೆ ಎಂದೆಂದೂ ನಾನು ಚಿರಋಣಿಯಾಗಿರುವೆನು.

❖ **ಅಜಮಿಳ ಮೋಕ್ಷ** ಯಕ್ಷಗಾನ ಪ್ರಸಂಗ ಕೃತಿಯನ್ನವಲೋಕಿಸಿ, ನನ್ನ ಕೋರಿಕೆಯನ್ನು ಮನ್ನಿಸಿ, ಸೇಸೆ ಮಾತುಗಳಿಂದ ತಮ್ಮ ಶಿಷ್ಯಳನ್ನು ಆಶೀರ್ವದಿಸಿದ ನನ್ನ ಗುರುದ್ವಯರಲ್ಲೋರ್ವರಾದ ಶ್ರೀಯುತ ಮುಕುಂದ ವಿಠಲದಾಸರು (ಕೀರ್ತಿಶೇಷ ಶ್ರೀ ಗುರುಗೋವಿಂದ ವಿಠಲ ದಾಸರ ಸುಪುತ್ರರು – ಎಂ.ಜಿ. ಮಾಧವರಾವ್, ಮೈಸೂರು) – ಇವರಿಗೂ,

❖ ನನ್ನ ಪ್ರಾರ್ಥನೆಯಂತೆ ತಮ್ಮ ಶಿಷ್ಯಳ ಈ ಕೃತಿಗೆ ಶುಭಾಶೀರ್ವಾದಗಳನ್ನು ನೀಡಿ, ಶುಭವನ್ನು ಹಾರೈಸಿದ, ನನ್ನ ಇನ್ನೋರ್ವ ಗುರುಗಳಾದ ಶ್ರೀಯುತ ವರಾಹ ಹರಿವಿಠಲದಾಸರು (ಕೆ.ಯಸ್. ವೆಂಕಟೇಶ್ – ಮಂಡ್ಯ) – ಇವರಿಗೂ,

❖ ನನ್ನ ಕೋರಿಕೆಯನ್ನು ಮನ್ನಿಸಿ, ಈ ಕೃತಿಗೆ 'ಬೆನ್ನುಡಿ'ಯನ್ನು ಬರೆದುಕೊಟ್ಟು ಆಶೀರ್ವದಿಸಿ, ಅಭಿನಂದಿಸಿದ ಹಿರಿಯ ಸಾಹಿತಿಗಳಾದ ಡಾ। ಅಮೃತ ಸೋಮೇಶ್ವರ, ಕೋಟೆಕಾರು – ಇವರಿಗೂ,

❖ ಈ ಕೃತಿಯ ಬಿಡುಗಡೆ ಸಮಾರಂಭ – ಹಾಗೂ ಯಕ್ಷಗಾನ ಪ್ರದರ್ಶನಕ್ಕೆ ತಮ್ಮ ತುಂಬು ಹೃದಯದಿಂದ ಸಹಕರಿಸಿ, ಬೆನ್ನು ತಟ್ಟಿ ಪ್ರೋತ್ಸಾಹಿಸಿದ ಹಾಗೂ ಕೃತಿಗೆ ಸವಿನುಡಿಯನ್ನು ಬರೆದುಕೊಟ್ಟು ಶುಭಹಾರೈಸಿದ ನನ್ನ ಆತ್ಮೀಯ ಬಂಧುಗಳೂ, ಹಿತೈಷಿಗಳೂ, 'ಶ್ರೀ ಕೃಷ್ಣ ಯಕ್ಷ ಸಭಾ' ಕದ್ರಿ – ಸಂಸ್ಥೆಯ ಪ್ರಧಾನ ಕಾರ್ಯದರ್ಶಿಗಳೂ ಆಗಿರುವ ಶ್ರೀಯುತ ಸುಧಾಕರ ರಾವ್ ಪೇಜಾವರ – ಇವರೆಲ್ಲರಿಗೆ ನನ್ನ ಅನಂತ ಕೃತಜ್ಞತೆಗಳು.

❖ ತೆರೆಯ ಮರೆಯಲ್ಲೇ ಇದ್ದು ಕೃತಿ ರಚಿಸುವಂತೆ ಸದಾ ನನ್ನನ್ನು ಹುರಿದುಂಬಿಸುತ್ತಿರುವ ಹರಿದಾಸ ಬಂಧುಗಳೂ, ಸ್ವತಃ ಹರಿದಾಸರೂ ಆಗಿರುವ ಶ್ರೀಯುತ ಹರಪನಹಳ್ಳಿ (ಹರಿಪುರ) ಸೇತುರಾಯರಿಗೆ ನನ್ನ ತುಂಬು ಹೃದಯದ ನಮನಗಳು.

❖ ಈ ಕೃತಿಯನ್ನು ರಚಿಸಲು ಸೂಕ್ತ ಸಲಹೆಗಳನ್ನು ನೀಡಿ ಸಹಕರಿಸಿದ ಯಕ್ಷಗಾನ ಕಲಾವಿದರಾದ ಶ್ರೀಮತಿ ಲೀಲಾವತಿ ಬೈಪಾಡಿತ್ತಾಯ ದಂಪತಿಗಳಿಗೂ, ಶ್ರೀಯುತ ಶ್ರೀಧರ ಡಿ.ಯಸ್. ಹಾಗೂ ಶ್ರೀಯುತ ಪ್ರಸಾದ್ ಬಲಿಪ ಭಾಗವತ – ಇವರೆಲ್ಲರಿಗೂ,

❖ ಈ ಕೃತಿಯನ್ನು ಅಚ್ಚುಕಟ್ಟಾಗಿ, ಅಂದವಾಗಿ ರಕ್ಷಾ ಕವಚದ ವಿನ್ಯಾಸದೊಂದಿಗೆ ಮುದ್ರಿಸಿ, ಕ್ಲಪ್ತ ಸಮಯಕ್ಕೆ ಒದಗಿಸಿಕೊಟ್ಟ ಪ್ರಿಂಟ್ ಡಿಸೈನ್ಸ್, ಅಳಕೆ, ಮಂಗಳೂರು – ಇವರಿಗೂ, ಪ್ರತ್ಯಕ್ಷ ಹಾಗೂ ಪರೋಕ್ಷವಾಗಿ ಸಹಕರಿಸಿ ಪ್ರೋತ್ಸಾಹಿಸಿ, ಶುಭವನ್ನು ಹಾರೈಸಿದ ಎಲ್ಲಾ ಆತ್ಮೀಯರಿಗೂ; ಭಕ್ತಿಪೂರ್ವಕವಾಗಿ ಓದುವ ಸಹೃದಯರಾದ ತಮ್ಮೆಲ್ಲರಿಗೂ ನನ್ನ ತುಂಬು ಹೃದಯದ ಕೃತಜ್ಞತೆಗಳು.

ಹರಿನಾಮ ಮಹಿಮೆಯನ್ನು ಸಾರುವ ಪುಣ್ಯ ಪ್ರಧಾನವಾದ ಸುಂದರ ಕಥಾನಕವಿದು. ಅರಿತಾದರೂ, ಅರಿಯದಾದರೂ, ನಾರಾಯಣನ ಅರ್ಧನಾಮವನ್ನಾದರೂ ಪಠಿಸಿದಲ್ಲಿ, ಪರಮ ಪಾಪಿಷ್ಠನೂ ಪಾವನನಾಗಿ, ಹರಿಯ ಲೋಕ (ಮೋಕ್ಷ)ವನ್ನು ಹೊಂದುವನು ಎಂಬುದಕ್ಕೆ ಭಾಗವತದ ಸುಂದರ ಕಥೆಯಾದ **ಅಜಮಿಳ ಮೋಕ್ಷ** – ಕಥಾ ಪ್ರಸಂಗವೇ ಸಾಕ್ಷಿ. ಈ ಕಥನ – ಕಾವ್ಯವನ್ನು ಪಾರಾಯಣ ಮಾಡುವ ಎಲ್ಲಾ ಭಗವದ್ಭಕ್ತರಿಗೂ ಶ್ರೀಮನ್ನಾರಾಯಣನು ಸನ್ಮಂಗಳವನ್ನುಂಟು ಮಾಡಲಿ ಎಂದು ಶುಭವನ್ನು ಹಾರೈಸುತ್ತೇನೆ.

ರಂಗನಾಥನ ಪಾದ ಭಜನೆ ಮಾಳ್ಪ ಹರಿದಾಸರ ದಾಸರ ದಾಸರ ।
ಸಂಗವನು ಕರುಣಿಸೋ ಶ್ರೀ ಗುರುಪ್ರಿಯವಿಠಲ ॥

ಮಂಗಳೂರು

ಬಿ.ಕೆ. ಶ್ರೀಮತಿ ರಾವ್
(ಶ್ರೀ ಗುರುಪ್ರಿಯವಿಠಲದಾಸಿ)

ಅರ್ಪಣೆ

ಪರಮ ಗುರುಗಳ ಕರುಣೆಯನ್ನು ಸ್ಮರಿಸುತ್ತಾ,
ಗುರುದ್ವಯರ ಚರಣಗಳಿಗೆರಗುತ್ತಾ,
ಹರಿಗುರು ಪ್ರೇರಣೆಯಿಂದ ಸ್ಫುರಿಸಿದ

ಅಜಮಿಳ ಮೋಕ್ಷ
(ಯಕ್ಷಗಾನ ಪ್ರಸಂಗ)

ಎಂಬ ಈ ಕೃತಿಯನ್ನು, ಎನ್ನ
ಬಿಂಬ ಮೂರುತಿ ಶ್ರೀಗುರುಪ್ರಿಯವಿಠಲನ
ಅಡಿದಾವರೆಗಳಲ್ಲಿ ಭಕ್ತಿ ಪೂರ್ವಕವಾಗಿ
ಸಮರ್ಪಿಸುತ್ತಿದ್ದೇನೆ

ಸಂತತ ಹರಿನಾಮ ಸ್ಮರಣೆ ಮಾಳ್ಪರ ಸಂಗವನು ।
ಕಂತುಪಿತ ಕರುಣಿಸೋ ಶ್ರೀ ಗುರುಪ್ರಿಯವಿಠಲ ॥

ಬಿ.ಕೆ. ಶ್ರೀಮತಿ ರಾವ್
(ಶ್ರೀ ಗುರುಪ್ರಿಯ ವಿಠಲದಾಸಿ)



ಶ್ರೀ ಹರಿಸ್ತುತಿ

ರಾಗ – ಭೈರವಿ **ಆದಿತಾಳ**

ಎನ್ನ ಸಿರಿಯೇ ಎನ್ನ ದೊರೆಯೇ
ಎನ್ನ ಭಾಗ್ಯದ ಕರುಣಾನಿಧಿಯೇ ॥ ಪ ॥

ಪನ್ನಗಾಚಲವಾಸ ಹರಿಯೇ
ನಿನ್ನ ಭಕುತರಿಗೆಣೆ ನಾನರಿಯೇ ॥ ಅ. ಪ. ॥

ಸನ್ನುತಾಂಗಿ ಶ್ರೀ ಸೀತಾಪತಿಯೇ
ಮುನ್ನ ಮಾಡಿದ ಪಾಪ ತೊಳೆಯೇ
ಬನ್ನ ಪಡಿಸದೆ ನಿನ್ನ ದಾಸರೊ –
ಳೆನ್ನನಿರಿಸಿನೀ ಪೊರೆಯೋ ಹರಿಯೇ ॥ ೧ ॥

ಧರೆಯೊಳತಿಶಯ ಸ್ವಾರ್ಥವಿಲ್ಲದೆ
ಮರೆಯದೆ ಹರಿನಾಮ ಮಹಿಮೆಯ
ನಿರುತ ಸ್ಮರಿಸುವ ಭಾಗ್ಯ ಕರುಣಿಸು
ಮರುತಾಂತರ್ಗತ ದಾಶರಥಿಯೇ ॥ ೨ ॥

ಲಕ್ಷ್ಮಣಾಗ್ರಜ ರಾಜಾರಾಮ
ಪಕ್ಷಿವಾಹನ ಸೀತಾರಾಮ
ಅಕ್ಷಯಾಂತಕ ಹನುಮತ್ಸೇವಿತ
ರಕ್ಷಿಸೆಮ್ಮ ಶ್ರೀ ಗುರುಪ್ರಿಯವಿಠಲ ॥ ೩ ॥

ಅಜಮಿಳ ಮೋಕ್ಷ (ಯಕ್ಷಗಾನ ಪ್ರಸಂಗ)

ಶಾರ್ದೂಲ ವಿಕ್ರೀಡಿತಂ

ಶ್ರೀ ಲಕ್ಷ್ಮೀವದನಾರವಿಂದ ಭ್ರಮರಂ ಪೀತಾಂಬರಾಲಂಕೃತಂ
ಫಾಲಾಕ್ಷಾದಿ ಸಮಸ್ತ ದೇವ ವಿನುತಂ ವಿಶ್ವಂಭರಾವಲ್ಲಭಮ್ ।
ಬಾಲಾರ್ಕಾಮಿತಕಾಂತಿಮಿಂದುವದನಂ ನಾರಾಯಣಂ ಕೇಶವಂ
ನೀಲಾಂಗಂ ಮಧುಸೂದನಂ ಗುರುಪ್ರಿಯಂ ಧ್ಯಾಯಾಮಿ ಚಿತ್ತೇ ಸದಾ ॥

ರಾಗ – ನಾಟ : ಝಂಪೆತಾಳ

ಜಯ ಜಯ ವಿನಾಯಕಗೆ । ಜಯ ಶಕ್ರಪಾಲಕಗೆ
ಜಯ ಕೋವಿದಪ್ರಿಯಗೆ । ಭುಜಚತುಷ್ಟಯಗೆ ॥
ಜಯತು ಜಯ ಜಯತು ॥ ॥ ಪ ॥

ಪಂಕೇಜ ನೇತ್ರನಿಗೆ । ಪಾವನ ಚರಿತ್ರನಿಗೆ
ಸಂಕಟ ನಿವಾರಕಗೆ । ಪರಶು ಧಾರಕಗೆ ॥
ಶಂಕರನ ತನಯನಿಗೆ । ಸುರನರರ ವಂದ್ಯನಿಗೆ
ಕಿಂಕರರ ಪೊರೆವವಗೆ । ವಿಘ್ನ ನಾಶಕಗೆ ॥
ಜಯತು ಜಯ ಜಯತು ॥ ೧ ॥

ಮೂಷಿಕಾರೂಢನಿಗೆ । ವರ ಏಕದಂತನಿಗೆ
ಶೇಷಭೂಷಣ ಪುತ್ರ । ಪಾಶಹಸ್ತನಿಗೆ ॥
ದೋಷ ದುರಿತವಿದೂರ । ಅಸುರಕುಲ ಸಂಹಾರ
ವಾಸುದೇವಪ್ರಿಯಗೆ । ಭಕುತವತ್ಸಲಗೆ ॥
ಜಯತು ಜಯ ಜಯತು ॥ ೨ ॥

ಜಯ ಹಸ್ತಿವರದನಿಗೆ । ಜಯತು ಲಂಬೋದರಗೆ
ಜಯ ಗೌರಿ ತನಯನಿಗೆ । ಶರವು ಗಣಪನಿಗೆ ॥
ಜಯ ಕಂಬುಕಂಧರಗೆ । ಜಯ ಚಂದ್ರಮೌಳಿಜಗೆ
ಜಯ ಶೂರ್ಪಕರ್ಣನಿಗೆ । ಗುರುಪ್ರಿಯನ ಸಖಿಗೆ ॥
ಜಯತು ಜಯ ಜಯತು ॥ ೩ ॥

ಭಾಮಿನಿ: ಹರಿಗೆರಗಿ ರಮೆಯಡಿಗೆ ವಂದಿಸಿ
ಹರವಿರಿಂಚಿಯರಿಂಗೆ ನಮಿಸುತ
ಗುರುಚರಣಕಭಿನಮಿಸಿ ಹಿರಿಯರ ನೆನೆದು ಭಕ್ತಿಯೊಳು ॥
ವರಪುರಾಣದೊಳಜಮಿಳಾಖ್ಯನ
ಪರಮಪುಣ್ಯದ ಚರಿತೆ ಗುರುಪ್ರಿಯ
ನೊರೆದು ಹರಸಿದ ತೆರದಿ ಪೇಳುವೆ ಯಕ್ಷಗಾನದೊಳು ॥ ೧ ॥

ದ್ವಿಪದಿ: ಹರಿನಾಮ ಚಿಂತನೆಗೆ ಎಣೆಯಿಲ್ಲ ಜಗದಿ
ಹರಿಯಲ್ಲದನ್ಯ ದೈವಗಳಿಲ್ಲ ನಿಜದಿ ॥ ೧ ॥

ಹರಿನಾಮದಿಂ ಪತಿತ ಪರಮಪದ ಪಡೆದ
ಹರಿಮಹಿಮೆಯನ್ನರಿತ ಯಮದೂರ ನಡೆದ ॥ ೨ ॥

ಭಗವಂತನೊಲಿದ ಅಜಾಮಿಳನೆಂಬ ಭಕ್ತ
ಮಿಗೆ ಭಾಗವತ ಕಥನ ಪುಣ್ಯಸಂಯುಕ್ತ ॥ ೩ ॥

ಒರೆವೆ ಗುರುಪ್ರಿಯ ವಿಠಲನೊಲುಮೆಯಂದದಲಿ
ಕರಿವರದನುರುನಾಮಮಹಿಮೆ ಭಕುತಿಯಲಿ ॥ ೪ ॥

ರಾಗ – ಸುರುಟಿ : ಏಕತಾಳ

ಅಂಬುಜನಾಭನಿಗೆ । ನಮಿಸುವೆ ।
ತುಂಬುರು ವಂದ್ಯನಿಗೆ ॥ ಪ ॥

ನಂಬಿದ ಭಕ್ತರಿಗಿಂಬನು ಪಾಲಿಪ
ಕುಂಭಿಣಿಪತಿ ಶ್ರೀ ಉಡುಪಿಯ ಕೃಷ್ಣಗೆ ॥ ಅ. ಪ. ॥

ವಾರಿಜನೇತ್ರನಿಗೆ । ಸುಗುಣಗೆ ।
ವಾರಿಧಿಶಯನನಿಗೆ
ಸಾರುತ ಸರಸಿಜ ಚರಣಕೆ ನಮಿಪೆ ನಿ–
ವಾರಿಸೊ ವಿಘ್ನವ ಮಾರನ ಜನಕನೆ ॥ ೧ ॥

ಅಜ ಜನಕನೆ ಹರಿಯೇ । ಪೊರೆ ನೀ
ಸುಜನರ ಪದಸಿರಿಯೇ ॥
ಭಜಿಸುತ ಅಜಮಿಳ ಮೋಕ್ಷದ ಕಥೆಯನು
ಸೃಜಿಸಲು ಮತಿಯನು ಕರುಣಿಸು ದೊರೆಯೇ ॥ ೨ ॥

ಧರೆಯೊಳು ಉಡುಪಿಯಲಿ । ನೆಲೆಸಿಹ
ಗುರುಪ್ರಿಯ ಕರುಣದಲಿ ॥
ಬರೆಯಲನುಗ್ರಹ ಬೇಡುತಲಾ ನೀ
ಗರುಹುವೆ ಯಕ್ಷಸುಗಾನಪ್ರಕಾರದಿ ॥ ೩ ॥

ಒಡ್ಡೋಲಗ : (ವೈಕುಂಠದಲ್ಲಿ ಲಕ್ಷ್ಮೀ – ನಾರಾಯಣರ ಓಲಗ)

ರಾಗ – ಸೌರಾಷ್ಟ್ರ : ತ್ರಿವುಡೆತಾಳ

ಆದಿ ಮಾಯಾದೇಶದನ್ವಯ
ಬಾಧಿಸುವ ದುರ್ಜನರ ತೀರಿಸಿ
ಸಾಧು ಸಜ್ಜನ ಭಕ್ತ ರಕ್ಷಕ
ನಾದ ಹರಿಯು ॥ ೧ ॥

ಪರಮ ಪದದಲಿ ತೋಷದಿಂದಲಿ
ಸಿರಿಯ ಸೇವೆಯಗೊಂಡು ವಿಭವದಿ
ಧರೆಯ ಭಕುತರ ಪರಿಯನೆಲ್ಲವ
ನರಿತನಾಗ ॥ ೨ ॥

ಮತ್ತೆ ನಸುನಗುತಾಗ ಶ್ರೀಹರಿ
ಹತ್ತು ರೂಪದಿ ಗೈದ ಲೀಲಾ
ವೃತ್ತಗಳನೊಂದೊಂದೆ ಲಕುಮಿಗೆ
ಬಿತ್ತರಿಸಿದ ॥ ೩ ॥

ಮೂರು ಲೋಕದ ಭಕ್ತ ಜನಸಂ –
ಸಾರ ಬಾಧೆಯ ದೂರಗೊಳಿಸುವೆ
ನೀರಜಾಂಬಕಿ ಲಾಲಿಸೆಂದಾ
ಮಾರ ಜನಕ ॥ ೪ ॥

ವಿಷ್ಣು – ಲಕ್ಷ್ಮಿಯರ ಸಂವಾದ:–

ರಾಗ – ಕಾಂಭೋದಿ : ಝಂಪೆತಾಳ

ವಿಷ್ಣು: ಕಾಂತೆ ಕೇಳ್ ಜಗದಲ್ಲಿ ಹರಿಮಾಯೆಯೊಳಗೆ ಜನ
ಅಂತರ್ಯವರಿಯದೆಯೆ ಸೋತೂ ॥
ಭ್ರಾಂತಿಯಿಂ ಲೌಕಿಕದ ಮೋಹಕ್ಕೆ ಸಿಲುಕಿ ಶ್ರೀ
ಕಾಂತನಂ ಮನದಿ ಮರೆತಿಹರು ॥ ೧ ॥

ಲಕ್ಷ್ಮಿ: ಅಚ್ಯುತನೆ ಲಾಲಿಸೈ ಅನವರತ ನಿನಗಿಹುದು
ಸಚ್ಚರಿತರನು ಪೊರೆವ ಬಿರುದು ॥
ಹುಚ್ಚು ಮನುಜರಲೊಮ್ಮೆ ಹರಿನಾಮ ಮಹಿಮೆಯನು
ಎಚ್ಚರಿಸಿ ಹರಸಬೇಕಯ್ಯ ॥ ೨ ॥

ವಿಷ್ಣು: ಸತಿಮಹಾಲಕುಮಿ ನೀನೆಂದುದತಿ ದಿಟವೈಸೆ
ಹಿತಕಾಲ ಬರುವುದತಿ ಬೇಗ ॥
ಮತಿವಂತರಿಗೆ ದಾರಿ ತೋರುವೆನು ಭಕುತಿಯಿಂ
ಪತಿತ ಪಾವನನೆನಿಪನಾಗ ॥ ೩ ॥

ರಾಗ – ಕೇದಾರಗೌಳ : ಅಷ್ಟತಾಳ

ಲಕ್ಷ್ಮಿ: ಕಾಯಜಪಿತ ನಿನ್ನ ಕಾಲಿಗೆರಗುವೆನು
ತೋಯಜಾಂಬಕ ಪಾಲಿಸು ॥
ಮಾಯಾ ರಕ್ಕಸರ ನಿರ್ಮೂಲ ಮಾಡಿರ್ಪ ನಾ–
ರಾಯಣ ಸ್ವಾಮಿ ನೀನು ॥ ೧ ॥

ಮೇದಿನಿಯೊಳು ನಿನ್ನ ನೆನೆವ ಸಜ್ಜನರನು
ಬಾಧಿಪರನು ಕೆಡಹಿ ॥
ಮೋದದಿಂದಿರುವ ಸೌಭಾಗ್ಯವ ಕರುಣಿಪ
ವೇದಪುರುಷ ಪಾಹಿಮಾಂ ॥ ೨ ॥

ರಾಗ – ಬೇಗಡೆ : ಏಕತಾಳ

ವಿಷ್ಣು: ಬೆದರದಿರೆಲೆ ರಮಣಿ । ರಮಾಮಣಿ
ಹೃದಯಸನ್ನಿಭ ಹರಿಣಿ ॥ ಪ ॥

ಹುಟ್ಟುವ ದುಷ್ವರ । ಅಟ್ಟಹಾಸವ ಕುಟ್ಟಿ
ಮಟ್ಟಹಾಕಲು ನಾನು । ಸೃಷ್ಟಿಯೊಳ್ ತ್ರಾಣಿ ॥
ಜಟ್ಟಿಯಂದದಿ ಕಟ್ಟಿ । ಮೆಟ್ಟಿ ಕೆಡಹಲಟ್ಟಿ
ಪೆಟ್ಟು ತಿನ್ನುತ ಪ್ರಾಣ । ಬಿಟ್ಟಿಪರ್ಯೆ ರಾಣಿ ॥ ೧ ॥

ವಚನ: ಇಂತು ಶ್ರೀಕಾಂತನು ಸತಿಯ ಸಂತವಿಸುತಿರಲು ವೈಕುಂಠದೆಡೆಗಾ
ದೇವಮುನಿ ನಾರದರು ಹರಿಸ್ಮರಣೆಯಂ ಮಾಡುತ್ತ ಬಂದರಾಗ–

ರಾಗ – ಕಾಂಭೋದಿ : ಏಕತಾಳ

ನಾರದ: ಕ್ಷೀರಸಾಗರಶಯನ । ನಾರಾಯಣ
ವಾರಿಜದಳನಯನಾ ॥
ಘೋರ ದುರಿತ ಸಂಸಾರದಿ ಭಕುತರ
ಪಾರುಮಾಡಿಸು ಭವತಾರಕ ಶ್ರೀಹರಿ ॥ ೧ ॥

ಗರುಡವಾಹನ ಗಮನ । ನಾರಾಯಣ
ನರಹರಿ ವಟುವಾಮನ ॥
ಸರಿದೊರೆ ನಿನಗಾರು ಹದಿನಾಲ್ಕು ಭುವನದಿ
ಸರಸಿಜಭವನಯ್ಯ ಸಿರಿನಾರಾಯಣ ಹರಿ ॥ ೨ ॥

ಕಂದ : ಈ ಪರಿ ನಾರದ ನುತಿಸಲ್ ।
ಶ್ರೀಪತಿ ಮುನಿಯಂ ಕರೆತಂದುಪಚರಿಸುತ್ತಂ ॥
ಪಾಪಂಗಳ ಪರಿಮಾರ್ಜನೆ
ಯಾಪರಿಯಂ ಮನದಿ ಚಿಂತಿಸುತಲಿಂತೆಂದಂ ॥ ೧ ॥

ವಿಷ್ಣು – ನಾರದರ ಸಂವಾದ: –

ರಾಗ – ದೇಶಿ : ಏಕತಾಳ

ವಿಷ್ಣು: ಏನು ಬಂದೆಯಯ್ಯಾ ನೀನು । ಮೌನಿವರ್ಯಾ ।
ಸಾನುರಾಗದಿಂದ ಪೇಳು । ಮೌನಿವರ್ಯಾ ॥
ಕ್ಷೇಮವಿಹುದೆ ಲೋಕದೊಳಗೆ । ನಾರದಾಖ್ಯ ।
ನೇಮದಿಂದ ಸುಖಿಸುತಿಹರೆ । ನಾರದಾಖ್ಯ ॥ ೧ ॥

ನಾರದ: ಏಕೆ ನಿನಗೆ ಅರಿಯದಿಹುದೇ । ಪದುಮನಾಭ ।
ಸಾಕು ನಿನ್ನೀ ನಾಟಕಾಂಕ । ಪದುಮನಾಭ ॥
ಏಕೆ ಎನ್ನ ಕರೆಸಿಕೊಂಡೆ । ಪರಮಪುರುಷ ।
ಲೋಕವಂದ್ಯ ಕರುಣೆ ದೋರು । ಪರಮಪುರುಷ ॥ ೨ ॥

ರಾಗ – ಕಾಪಿ : ಅಷ್ಟತಾಳ

ವಿಷ್ಣು: ಲಾಲಿಸಿ ಕೇಳೆನ್ನ ಮಾತ । ವಾಣೀ
ಬಾಲಸದ್ಗುಣವಂತ ಲೋಕಪ್ರಖ್ಯಾತ ॥ ಪ ॥

ಭೂಲೋಕದೊಳಗೆ ಸಂಚರಿಸು । ನೀನು
ಪೇಳುವ ಹರಿನಾಮ ಮಹಿಮೆಯ ತಿಳಿಸು ॥
ಬಾಳಿನ ಬವಣೆಯನ್ನಳಿಸು । ಜೀವ
ಜಾಲ ಸಂಗ್ರಹಿಸಲಿ ಪುಣ್ಯದ ಬೆಳಸು ॥ ೧ ॥

ಸಾಂಗತ್ಯ : ರೂಪಕತಾಳ

ನಾರದ: ಶ್ರೀಪತಿ ನೀನೆಂದ ನುಡಿಯನು ತಿಳಿದೆನು ।
ಪೋಪೆನು ಭೂತಳಕೀಗ ॥
ಪಾಪಿಗಳುದ್ಧಾರಕೋಸುಗ ಹರಿನಾಮ ।
ದಾ ಪುಣ್ಯ ಮಂತ್ರ ಬೋಧಿಪೆನು ॥ ೧ ॥

ರಾಗ – ಮಧ್ಯಮಾವತಿ : ತ್ರಿವುಡೆತಾಳ

ಹರಿನಿರೂಪವ ಕೇಳಿ ಮುದದಿಂ
ಧರೆಗೆ ನಾರದ ಬಂದನು ॥
ಹರಿಯ ಮಂಗಳ ನಾಮ ಜಪಿಸಲು
ಸುರರು ವೃಷ್ಟಿಯ ಸುರಿದರು । ಹರುಷದಿಂದ ॥ ೨ ॥

ಅಜಮಿಳನ ಪ್ರವೇಶ:

ರಾಗ – ಶಂಕರಾಭರಣ : ರೂಪಕತಾಳ

ಕನ್ಯಾಕುಬ್ಜ ದೇಶದಲ್ಲಿ ।
ಮಾನ್ಯವಂತ ವಿಪ್ರನೊಬ್ಬ ।
ಧನ್ಯನಾಗಿ ಶಾಸ್ತ್ರ ಧರ್ಮ । ನೀತಿವಂತನೂ ॥ ೧ ॥

ಮಾತಾಪಿತರ ಸೇವಿಸುತ್ತ ।
ಸತಿಯ ಸುತರ ಪ್ರೀತಿಸುತ್ತ ।
ಸತತ ಶೀಲವಂತನಿದ್ದ । ಅಜಮಿಳಾಖ್ಯನೂ ॥ ೨ ॥

ಸರ್ವರಿಂಗು ಹಿತವ ಬಯಸಿ ।
ಸರ್ವರಲ್ಲು ಸೌಖ್ಯವೆರಸಿ ।
ಸರ್ವವಂದ್ಯನಾಗಿ ಜಗದಿ । ಬಾಳುತಿದ್ದನೂ ॥ ೩ ॥

ಅಜಮಿಳನ ವನಗಮನ / ವನವರ್ಣನೆ

ರಾಗ – ಮಧುಮಾಧವಿ : ತ್ರಿವುಡೆತಾಳ

ಒಂದು ದಿನ ಅಜಮಿಳನು ತನ್ನಯ
ತಂದೆಯಾಣತಿಯಂತೆ ವಿಪಿನಕೆ ॥
ಬಂದು ಸುಮಫಲ ಸಮಿಧೆ ಸಂಗ್ರಹ
ಕೆಂದು ತಿರುಗಾಡುತ್ತಲಿ ॥ ೧ ॥

ನೋಡುತಜಮಿಳ ದಟ್ಟಕಾಡಿನ
ಗಾಢ ಸಿರಿಸೌಂದರ್ಯ ಸ್ವರ್ಗದ
ಬೀಡಿನರಮನೆಯೊಳಗೆ ತಾ ನಲಿ
ದಾಡಿ ಸಂತಸವಾಂತನು ॥ ೨ ॥

ರಾಗ – ಪೂರ್ವಿ : ಅಷ್ಟತಾಳ

ಎತ್ತ ನೋಡಲತ್ತ ಕಾಂಬ ವೃಕ್ಷ ಕಲ್ಪ ಕುಜಗಳು । ದಿಟ್ಟಿ
ಸುತ್ತ ಸೊಗದ ಸರಿತೆ ಮತ್ತೆ ಹರಿವ ಸುಧೆಯ ಸೆಲೆಗಳು ॥
ಚಿತ್ತದಲ್ಲಿ ಮತ್ತು ಬರಿಪ ಪುಷ್ಪಲತಾ ಕುಂಜವು । ಆಹಾ
ನಿತ್ಯ ನೂತನತೆಯ ತೋರ್ಪ ವನವಧೂವಿಲಾಸವು ॥ ೧ ॥

ರಾಗ – ಬೇಗಡೆ : ಅಷ್ಟತಾಳ

ಮುಂದೈತರುತಲಜಮಿಳನು । ಕಂಡು
ಕೆಂದಾವರೆಯ ಸರಸಿಯನು ॥ ಮತ್ತೆ
ಸುಂದರ ಸುಮಫಲವಾಯುತ್ತ ಸಮಿಧೆಯ
ಚಂದದಿ ಕೂಡಿಸಿ ಕೊಂಡುಪೋಗುವೆನೆಂದು ॥ ೧ ॥

ಬಾಯಾರಿ ಬಲು ಬಳಲಿದನು । ದೇಹ
ಆಯಾಸಗೊಂಡೊರಗಿದನು ॥ ಆಗ
ಗಾಯನ ಕೇಳಲು ಕಿವಿಗೆ ತಾನಿಂಪಾಗಿ
ಕಾಯ ಪಂಚೇಂದ್ರಿಯದಾಯಕ್ಕೆ ಮರುಳಾಗಿ ॥ ೨ ॥

ವೃಷಲನಿರಲು ವೇಶ್ಯೆಯೊಡನೆ । ಕಾಮ
ತೃಷೆಯನೀಂಟುವ ದೃಶ್ಯವದನೆ । ಕಂಡು
ವಿಷಮಗೊಂಡಿತು ಮನ ಪರಿಕಿಸುತಾಗಲೆ
ವಿಷಯಸುಖದ ವಾಂಛೆಗಾಗಿ ಹಂಬಲಿಸಲು ॥ ೩ ॥

ವಚನ :ಅಜಮಿಳನು ಆ ವೇಶ್ಯೆಯನ್ನು ಕಂಡು ತನ್ನಲ್ಲೇ ಮಾತಾಡಿಕೊಂಡನು
ಅದೆಂತೆನೆ –

ರಾಗ – ಅಭೇರಿ : ಅಷ್ಟತಾಳ

ಆರಿಹಳ್ ಅಮಮ ಈ ನಾರಿ ವೈಯ್ಯಾರಿ । ಚಕೋರಿ
ಮಾರನ ಕಠಾರಿ ಮೂರ್ಲೋಕ ಸಿಂಗಾರಿ ॥ ಪ ॥

ಮಾರನರಗಿಣಿಯಂತೆ ಪೋಲುವ
ಸಾರಸುಂದರಿ ಸುಗುಣ ರೂಪಿಣಿ ।
ವಾರಿರುಹದಳ ನಯನೆ ಕಾಮಿನಿ
ಕೀರವಾಣಿ ಸುನೀಲವೇಣೀ ॥ ಅ.ಪ. ॥

ಚಂದಿರಾನನೆ ಚೆಲ್ವೆ ರಮಣೀಯ ರಂಭೆ । ಏನೆಂಬೆ ।
ಮಂದಗಮನೆ ಮನುಮಥನ ಕೈಗೊಂಬೆ ॥
ಚೆಂದುಟಿಯ ಮರಿದುಂಬಿಕುಂತಳೆ
ಕುಂದರದನೆ ಸುಗಂಧ ಸುರವಧು
ಮುಂದುಗಾಣೆನು ಕಾಮಶರದಲಿ
ಬೆಂದೊಡಲ ತಣಿಸುವುದು ಭಾಮಿನಿ ॥ ೧ ॥

ರಾಗ – ಶಂಕರಾಭರಣ : ಏಕತಾಳ

ವಿಪ್ರ : ತರುಣಿ ನೀನು ಯಾರು ಪೇಳೆ
ಹರುಷದಿಂದ ಎನ್ನ ಕೂಡೆ
ಕರುಣೆ ತೋರಿ ಮಾತನಾಡೆ
ಕರವ ಮುಗಿಯುವೆ ॥ ೧ ॥

ತರುಣಿ ಮತ್ತು ಅಜಮಿಳ ವಿಪ್ರನ ಸಂವಾದ:

ರಾಗ – ದೇಶಿ : ಏಕತಾಳ

ತರುಣಿ: ಆವ ವರ್ಣದವನು ನೀನು । ಪೇಳು ಮಾನವ
ಆವಲ್ಲಿಂದ ಬಂದಿಹೆಯೊ । ಬಿಡು ದುಮ್ಮಾನವ ॥
ಆವ ಕಾರ್ಯವಿಹುದಿಲ್ಲಿ । ನುಡಿ ವಿಧಾನವ
ಆವ ಕಡೆ ವಾಸಿಪೆ ನೀ । ಪೇಳೊ ತಾಣವ ॥ ೧ ॥

ವಿಪ್ರ: ಆವ ವರ್ಣವಾದರೇನು । ಕೇಳೆ ಕೋಮಲೆ । ಮ
ತ್ತ್ಯಾವ ವರ್ಗವಾದರೇನು । ಮುದ್ದು ಶ್ಯಾಮಲೆ ॥
ಪಾವಕಂಗೆ ಭೇದವಿಹುದೇ । ಸುಡಲು ಕೇಳೆಲೆ
ಕಾವದೇವನೊಬ್ಬನೆಂದು । ತಿಳಿದು ನೋಡೆಲೆ ॥ ೨ ॥

ತರುಣಿ: ಪೆತ್ತ ತಾಯಿ ತಂದೆ ಯಾರು । ಪೇಳು ಮಾಜದೆ
ಉತ್ತಮ ನಾಮಾಂಕಿತವ । ತಿಳಿಸೋ ಸಾಜದೆ ॥
ಸುತ್ತು ಬಳಸದೆಲ್ಲ ನೀನು । ನುಡಿ ಸರಾಗದೆ
ಹೊತ್ತು ಕಳೆಯದೆನಗೆ ನಿಜವ । ಪೇಳೊ ಬೇಗದೆ ॥ ೩ ॥

ವಿಪ್ರ: ದ್ವಿಜರ ಕುಲದಿ ಜನಿಸಿಹೆನು । ಕೇಳೆ ಚಂದ್ರಿಕೆ
ಯಜನ ಪರಿಕರಗಳನೊಯ್ಯೆ । ಬಂದೆ ವಿಪಿನಕೆ ॥
ಅಜಮಿಳ ನಾಮಕನು ನಾನು । ಏಕೆ ನಾಚಿಕೆ
ನಿಜವ ನುಡಿವೆ ಮೋಹಗೊಂಡೆ । ಬಾರೆ ಸನಿಹಕೆ ॥ ೪ ॥

ತರುಣಿ: ಮೇಲು ವರ್ಗದವನು ನೀನು । ನುಡಿಯದೀ ತೆರ
ಕೀಳು ಕುಲದ ಎನ್ನ ಮೋಹ । ಬಿಡು ಬಿಡಾತುರ ॥
ಹಾಳು ಮನಕೆ ಸೋಲಬೇಡ । ಪಾಪ ಭೀಕರ
ಬಾಳು ನರಕ ಖಚಿತವಹುದು । ತಿಳಿಯೊ ದ್ವಿಜವರ ॥ ೫ ॥

ವಿಪ್ರ: ನಿನ್ನ ರೂಪಿಗಾನು ಸೋತೆ । ತರುಣಿ ರನ್ನೆಯೆ
ನಿನ್ನ ಸಂಗ ಸುಖವ ನೀಡೆ । ಕಾವ್ಯ ಕನ್ನೆಯೆ ॥
ನಿನ್ನ ಪ್ರೇಮವೊಂದೇ ಸಾಕು । ಗುಣ ಸಂಪನ್ನೆಯೆ
ಎನ್ನವರನು ತೊರೆದು ಬರುವೆ । ಮಧು ಮೋಹನ್ನೆಯೆ ॥ ೬ ॥

ಕಂದ: –

ಇಂತೀ ಪರಿಯಲಿ ದಾಸಿಯ ।
ಸಂತೈಸಿರಲಾಕೆ ಮುದದಿ ವಿಪ್ರನ ಸೇರಲ್ ।
ಸಂತತ ಸುಮಶರನಾಟದಿ ।
ಪೊಂದಿರಲತಿಪುತ್ರರನುಂ ಕಾಲಾಂತರದೊಳ್ ॥ ೧ ॥

ವಾರ್ಧಕ:

ಈ ತೆರದಿ ದಾಸಿಯೊಳು ರಮಿಸುತ್ತಲಾ ವಿಪ್ರ
ಸಾತಿಶಯ ಮೋಹದಿಂ ಮರೆತು ಸತಿಸುತರುಗಳ
ಪಾತಕವ ಸಂಚಯಿಸಿ ಪತಿತನಾದನು ಕೊನೆಗೆ ರೋಗರುಜಿನದಿ ನರಳುತ ।
ಮಾತು ಹೊರಳದೆ ಮಂಚಕೊರಗಿ ಮಲಗಿರುತ ಸಂ
ಜಾತ ನಾರಾಯಣನ ಕರೆಯಲಾರದೆ ಜಿಹ್ವೆ
ಯೋತು ನಾರಗನೆಂದು ಕಷ್ಟದಿಂದುಚ್ಚರಿಸಿ ಕೊನೆಯುಸಿರ ತಾನೆಳೆದನು ॥ ೧ ॥

ಯಮಧರ್ಮರಾಯನ ಒಡ್ಡೋಲಗ :

ರಾಗ – ಸೌರಾಷ್ಟ್ರ : ತ್ರಿವುಡೆತಾಳ

ಇತ್ತಲೀತೆರನಾಗೆ ಶೈಮಿನಿ
ಪತ್ತನದಿ ಯಮರಾಯನೋಲಗ
ವಿತ್ತು ವಿಭವದಿ ಚಿತ್ರಗುಪ್ತನ
ಮತ್ತೆ ಕರೆದ ॥ ೧ ॥

ಕೇಳು ಕೇಳೆಲೊ ಚಿತ್ರಗುಪ್ತನೆ
ಪೇಳು ಧರೆಯೊಳಗಿರುವ ಮನುಜರ
ಖೂಳ ಪಾಪಾತ್ಮರ ಚರಿತ್ರೆಯ
ಪಾಳು ಪುಟವ ॥ ೨ ॥

ರಾಗ – ಸಾರಂಗ : ಅಷ್ಟತಾಳ

ಚಿತ್ರಗುಪ್ತ ಲಾಲಿಸಬೇಕು ಜೀಯಾ । ನಮ್ಮ ಒಡೆಯ
ಲಾಲಿಸಬೇಕು ಜೀಯಾ ॥
ಕಾಲಧರ್ಮವ ಮೀರಿ ಬಾಳುವ ದುಶ್ಶೀಲ
ಖೂಳ ಅಜಾಮಿಳ ವಿಪ್ರನ ಚರ್ಯಾ ॥ ೧ ॥

ಅಜಮಿಳನೆಂಬ ಭಟ್ಟ । ಈ ಧರೆಯೊಳು
ನಿಜನೇಮ ನಿಷ್ಠೆ ಬಿಟ್ಟ ॥
ಕುಜನರ ಸಂಗಕೆ ಸಿಲುಕುತ್ತ ತನ್ನಯ
ನಿಜ ಸತಿ ಸುತರನು ತ್ಯಜಿಸಿದ ಭ್ರಷ್ಟ ॥ ೨ ॥

ಧಾರೆಯ ಸತಿಯ ಬಿಟ್ಟು । ಪರ
ನಾರೀ ಮೋಹದಲಿ ಕೆಟ್ಟು ॥
ವಾರಾಂಗನೆಯನು ಪೊಂದುತ ದಶಪುತ್ರರ
ಘೋರ ವೃದ್ಧಾಪ್ಯದಿ ಪಡೆದು ಸತ್ತಿಹ ಗುಟ್ಟು ॥ ೩ ॥

ರಾಗ – ಮಾರವಿ : ಏಕತಾಳ

ಇನಿತಾ ವಿಪ್ರನ ಕಥೆಯನು ಕೇಳುತ
ಕನಲಿದ ಯಮರಾಯಾ ॥
ಕನಿಕರವಿಲ್ಲದೆ ಪಾಪಿಯನಿಲ್ಲಿಗೆ
ಕ್ಷಣದಲಿ ತಾರೆಂದಾ ॥ ೧ ॥

ಜಾರೆಯ ಸಂಗವ ಮಾಡಿದ ವಿಪ್ರನ
ಭೋರನೆ ಕರೆತಂದು ॥
ಕೂರಸಿಯಲಗಿನ ಕುಂಭೀಪಾಕವ
ತೋರುವುದೀಗೆಂದ ॥ ೨ ॥

ಯಮದೂತರ ಪ್ರವೇಶ:

ರಾಗ – ಮಧುಮಾಧವಿ : ತ್ರಿವುಡೆತಾಳ

ಬಂದರಾಗಲೆ ಯಮನ ದೂತರು
ನಿಂದರಲ್ಲಿಯೆ ವಿಪ್ರನಾ ಬಳಿ ॥
ತಂದ ಪಾಶವ ಬಿಗಿದು ಕೊರಳಿಗೆ
ಮಂದಮತಿಯನು ಒಯ್ಯಲೂ ॥ ೧ ॥

ಕ್ರೂರ ನೋಟದಿ ಯಮನ ದೂತರು
ಕೋರೆ ಹಲ್ಗಳ ಕಡಿಯುತಿದ್ದರು ॥
ಬೀರಿ ಪಾಶವ ಬಿಗಿಯುತಾಕ್ಷಣ
ಸಾರಿ ಬರೆ ವೈತರಣಿಗೆ ॥ ೨ ॥

ಭಾಮಿನಿ :

ಇತ್ತ ಕೇಳಿದ ಹರಿಯು ತನ್ನಯ
ಭಕ್ತ ನುತಿಸಿದ ಅರ್ಧನಾಮವ
ಅತ್ತ ಕಳುಹಿದ ಧರೆಗೆ ತನ್ನಯ ವಿಷ್ಣುದೂತರನೂ ॥
ಮತ್ತೆ ಅಜಮಿಳನಾತ್ಮ ದಂಡನೆ
ಯುಕ್ತವಲ್ಲೆಂದರಿತು ಹರಿಚರ
ರೊತ್ತಿ ತಡೆದರು ಕಾಲನಾಳ್ಗಳ ಪೇಳಲೇನದನು ॥ ೧ ॥

ವಿಷ್ಣುದೂತರಿಗೂ ಮತ್ತು ಯಮದೂತರಿಗೂ ಯುದ್ಧ :

ರಾಗ – ಶಂಕರಾಭರಣ : ಮಟ್ಟೆತಾಳ

ವಿಷ್ಣುದೂತ:

ಎಲವೊ ಯಮನದೂತರಿಂತು । ಕಲುಷರಹಿತ ವಿಪ್ರನನ್ನು ।
ಎಳೆದು ನರಕಕೊಯ್ವಿರೇಕೆ । ಸುಲಭವಲ್ಲದು ॥ ೧ ॥

ಯಮದೂತ:

ವೇಶ್ಯೆಯೊಡನೆ ಸಂಗಗೈದು । ದೋಷಪೂರ್ಣನಾದನಿವನು ।
ಪಾಶದಿಂದ ಬಂಧಿಸಿಹೆವು । ಬೇಸರಿಲ್ಲದೆ ॥ ೨ ॥

ವಿಷ್ಣುದೂತ:

ಹರಿಯ ನಾಮದರ್ಧವನ್ನು । ಸ್ಮರಿಸಿದಂಥ ಪುಣ್ಯಜೀವಿ ।
ಪರಮ ವಿಷ್ಣುಲೋಕದೆಡೆಗೆ । ಭರದೊಳೊಯ್ವೆವು ॥ ೩ ॥

ಯಮದೂತ:

ಶೀಲಗೆಟ್ಟ ವಿಪ್ರನಿವನ । ಕಾಲನಾಜ್ಞೆಯಂತೆ ಸೆಳೆವ ।
ಆಳುಗಳನು ತಡೆವಿರೇಕೆ । ಸೋಲು ನಿಶ್ಚಯ ॥ ೪ ॥

ವಿಷ್ಣುದೂತ :

ಹರಿಯ ದೂತರ್‍ಯೆಸೆ ನಾವು । ಬರಿದೆ ಮಾತದೇಕೆ ನಿಮಗೆ ।
ಶರಣನಿವನ ಪರಮಪದಕೆ । ಕರೆಯ ಬಂದೆವು ॥ ೫ ॥

ಯಮದೂತ:

ಸಾಕು ನಿಮ್ಮ ಮಾತಿದೆಲ್ಲ । ಲೋಕವೆಲ್ಲ ನಮ್ಮ ಪರಿಧಿ
ಕಾಕುತನವ ತೋರಬೇಡಿ । ಜೋಕೆ ತೊಲಗಿರಿ ॥ ೬ ॥

(ಯುದ್ಧ ನಡೆದು ಯಮದೂತರು ಸೋಲುತ್ತಾರೆ)

* * * *

ವಚನ: ಮತ್ತಾ ಯಮದೂತರು ಸೋತು, ಜೋತುಮುಖದಲ್ಲಿ ಯಮಪುರಿಗೈ ತಂದು, ತಮ್ಮೊಡೆಯನಲ್ಲಿ ಏನೆಂದರು ಎಂದರೆ –

ರಾಗ – ಮುಖಾರಿ : ಏಕತಾಳ

ಒಡೆಯ ಲಾಲಿಸಯ್ಯಾ ಜೀಯಾ । ನಿಮ್ಮಾಜ್ಞೆಯ
ಪಡೆದು ಧರೆಗೆ ನಾವ್ ತೆರಳಿದೆವಯ್ಯಾ ॥
ಕಡೆಗಾಲದಿ ದ್ವಿಜ ಹರಿಯೆಂದೊರೆಯಲು
ತಡೆದರು ನಮ್ಮನು ಹರಿಭಟರಯ್ಯಾ ॥ ೧ ॥

ಹರಿಯ ಭಕುತನೆಂದವರೊರೆದೂ । ಅಜಮಿಳನೆಂಬನ
ದುರಿತಗಳೆಲ್ಲವ ಭರದಲಿ ಕಳೆದೂ ॥
ಹರಿಚರರೊಂದಿಗೆ ಬವರದಿ ಸೋತೆವು
ದೊರೆ ನಿಮ್ಮ ಚರಣದ ಮೊರೆ ಸೇರಿದೆವು ॥ ೨ ॥

ವಚನ: ಯಮದೂತರಿಂದ ಅಜಮಿಳನ ಸಮಗ್ರ ವಾರ್ತೆಯಂ ಕೇಳಿ,
ಮತ್ತೆ ಯಮಧರ್ಮರಾಯನು ಸಂತೈಸುತ್ತಾ ಆ ದೂತರಿಂಗೆ
ಏನೆಂದನೆಂದರೆ –

ರಾಗ – ಕೇದಾರಗೌಳ : ಅಷ್ಟತಾಳ

ಯಮ: ಅಜ ಹರ ನಾರದ ಸನಕಾದಿ ಕಪಿಲರು
ಭುಜಬಲಿ ಕಲಿ ಭೀಷ್ಮರು ।
ನಿಜದಿ ಸ್ವಾಯಂಭುವ ಜನಕ ಪ್ರಹ್ಲಾದರು
ಸುಜನ ವೈಷ್ಣವ ಮುಖ್ಯರು ॥ ೧ ॥

ವರ ಶುಕ ಯಮಧರ್ಮ ದ್ವಾದಶಶ್ರೇಷ್ಠರು
ಧರೆಯೊಳು ಪೂಜಿತರು ।
ಹರಿಚರಿತಾಮೃತ ಭಾಗವತೋತ್ತಮ
ಪರಮಾರ್ಥ ಕೋವಿದರು ॥ ೨ ॥

ರಾಗ – ಹಿಂದೋಳ : ಝಂಪೆತಾಳ

ಯಮ: ಮುಟ್ಟದಿರಿ ಮುಟ್ಟದಿರಿ ಮುರಹರನ ಸ್ಮರಿಪರನು ।
ಕಟ್ಟಾಜ್ಞೆ ಇದು ಕೇಳಿ ಕಡು ನಿಷ್ಠೆಯಿಂದ ॥ ಪ ॥

ಪಾಪಿಯಾಗಲಿ ಘೋರ ಪಾತಕಿಯೆ ತಾನಿರಲಿ ।
ಶ್ರೀಪತಿಯ ನೆನೆದವಗೆ ಮೋಕ್ಷಸುಖವಿರಲಿ ॥ ೧ ॥

ಜಪಿಸಿದರೆ ಹರಿನಾಮದರ್ಧಮಾತ್ರದ ವಿವರ
ಕುಪಿತರಾಗದೆ ಕಳುಹಿ ವೈಕುಂಠಕವರ ॥ ೨ ॥

ಅಜಮಿಳನ ಹರಿಸ್ತುತಿ

ರಾಗ – ಶಂಕರಾಭರಣ : ಮಟ್ಟೆತಾಳ

ಇತ್ತ ಜವನ ಪಾಶಬಂಧ
ಮುಕ್ತವಾಯ್ತು ವಿಪ್ರನಾತ್ಮ
ಚಿತ್ತದಲ್ಲಿ ನೆನೆದ ತನ್ನ । ವೃತ್ತ ಜೀವನ ॥ ೧ ॥

ರಾಗ – ಪಂತುವರಾಳಿ : ಏಕತಾಳ

ಎಂಥ ಪಾಪವಯ್ಯಾ । ಗೈದಿಹೆ । ನೆಂಥ ಪಾಪವಯ್ಯಾ ।
ಕಂತುಪಿತನ ಮರೆತು । ಕಾಂತೆಯನು ತೊರೆದು ।
ಚಿಂತೆಗೊಳಗಾಗಿ ಕಡು ಸೋತೆನಲ್ಲಾ ॥ ೧ ॥

ದಾಸನಾಗಲಿಲ್ಲಾ । ಮೋಸದಿ । ದಾಸಿಗೊಲಿದೆನಲ್ಲಾ ।
ದಾಸಿಯೊಳು ಆಸೆ । ಕಾಸು ವೀಸದಾಸೆ ।
ಘಾಸಿಗೊಳಿಸಿತಲ್ಲಾ ॥ ೨ ॥

ಭ್ರಷ್ಟನಾದೆನಲ್ಲಾ । ಪುಣ್ಯವು । ನಷ್ಟವಾಯಿತಲ್ಲಾ ।
ದುಷ್ಟ ಮನದಿಂ । ದಿಷ್ಟರ ತೊರೆದೀ ।
ಕಷ್ಟಕ್ಕೊಳಗಾದೆನಲ್ಲಾ ॥ ೩ ॥

ಎಚ್ಚರಗೊಳಲಿಲ್ಲಾ । ದುರಾಸೆಲಿ । ಹುಚ್ಚನಾದೆನಲ್ಲಾ ।
ಸ್ವಚ್ಛ ಮನದಿಂ । ದಚ್ಯುತ ನಾಮವ ।
ನುಚ್ಚರಿಸಲಿಲ್ಲವಲ್ಲಾ ॥ ೪ ॥

ರಾಗ – ಮೋಹನ : ತ್ರಿವುಡೆತಾಳ

ಜಯತು ಶ್ರೀ ಗೋಪಾಲ ಬಾಲನೆ
ಜಯತು ನಾರದ ವಂದ್ಯನೇ ॥
ಜಯತು ತುಂಬುರು ಗಾನಲೋಲನೆ
ಜಯತು ಲಕ್ಷ್ಮೀರಮಣನೆ ॥ ಜಯತು ಜಯತು ॥ ೧ ॥

ಜಯತು ಮತ್ಸ್ಯನೆ ಕೂರ್ಮ ವರಹನೆ
ಜಯತು ನರಹರಿ ರೂಪನೆ ॥
ಜಯತು ವಾಮನ ಪರಶುರಾಮನೆ
ಜಯತು ಸೀತಾರಾಮನೆ ॥ ಜಯತು ಜಯತು ॥ ೨ ॥

ಜಯತು ರುಕ್ಮಿಣಿ ರಾಧೆಯರಸನೆ
ಜಯತು ಮುನಿವರ ಬುದ್ಧನೆ ॥
ಜಯತು ಕಲ್ಕಿಯ ರೂಪಧಾರನೇ
ಜಯತು ಭಕ್ತೋದ್ಧಾರನೇ ॥ ಜಯತು ಜಯತು ॥ ೩ ॥

ವಚನ: ಈ ತೆರದೊಳ್ ಅಜಮಿಳನು ಬಹಳ ಭಕ್ತಿಯಲಿ ಶ್ರೀಪತಿಯಂ ಸ್ತುತಿಸಲು, ಶ್ರೀಹರಿಯು ಪ್ರಸನ್ನನಾಗಿ ಭಕ್ತನ ಸಮ್ಮುಖದಲ್ಲಿ ಪ್ರಕಟನಾಗಿ ಏನೆಂದನು ಎಂದರೆ–

ರಾಗ – ಮಾರವಿ : ಏಕತಾಳ

ಮೆಚ್ಚಿದೆ ಅಜಮಿಳ ನಿನ್ನಯ ಭಕ್ತಿಗೆ
ಮುಚ್ಚು ಮರೆಯದೇಕೆ ॥
ಸ್ವಚ್ಛ ಮನದಿಂದುಚ್ಚರಿಸಿದೆ ನೀ
ಅಚ್ಯುತನರೆನಾಮ ॥ ೧ ॥

ಕರುಣಿಪೆ ವಿಪ್ರನೆ ಮೋಕ್ಷದ ಪದವಿಯ
ನುರುತರ ಸೌಭಾಗ್ಯ ॥
ಮೆರೆಯಲಿ ಅಜಮಿಳ ಮೋಕ್ಷದ ಚರಿತೆಯು
ಹರಿನಾಮದ ಮಹಿಮೆ ॥ ೨ ॥

ಎನ್ನುತ ಹರಸುತ ಶ್ರೀಹರಿ ವಿಪ್ರನ
ತನ್ನೊಡನೊಯ್ದಿಹನೂ ॥
ಪುಣ್ಯಪ್ರದ ಕಥೆ ಕೇಳುತ ದಿವಿಜರು
ಬಣ್ಣಿಸಿ ನುತಿಸಿದರು ॥ ೩ ॥

ಮಂಗಲ ಪದ

ರಾಗ – ಮಧ್ಯಮಾವತಿ : ಏಕತಾಳ

ಜಯ ಮಂಗಲಂ । ನಿತ್ಯ । ಶುಭಮಂಗಲಂ ॥ ಪ ॥

ಕ್ಷೀರಾಬ್ಧಿವಾಸಗೆ । ವಾರಿಧಿಶಯನಗೆ
ನಾರದನುತ ನಾರಾಯಣಗೆ ॥
ವಾರಿಜನಾಭಗೆ । ವಾಸುಕೀಶಯನಗೆ
ಶ್ರೀರಮೆಯರಸಗೆ ಶ್ರೀಧರಗೆ ॥ ೧ ॥

ನಿಗಮ ಉದ್ಧಾರಗೆ । ಅಗಣಿತ ಮಹಿಮಗೆ
ನಗಧರ ಭೂವರ । ಖಗವಾಹಗೆ ॥
ಜಗದಭಿರಾಮಗೆ । ರಾಜೀವನಯನಗೆ
ಹಗೆಗಳನಳಿಸಿದ । ನರಹರಿಗೇ ॥ ೨ ॥

ನಂದನ ಕಂದಗೆ । ನವನೀತಚೋರಗೆ
ವೃಂದಾವನಪತಿ । ಗೋವಿಂದಗೆ ॥
ಇಂದಿರಾರಮಣಗೆ । ಶೃಂಗಾರಲೋಲಗೆ
ಕಂದರ್ಪ ಪಿತನಿಗೆ । ಗುರುಪ್ರಿಯಗೇ ॥ ೩ ॥

॥ ಶ್ರೀ ಕೃಷ್ಣಾರ್ಪಣಮಸ್ತು ॥

ಅಜಮಿಳ ಮೋಕ್ಷ – ಯಕ್ಷಗಾನ ಪ್ರಸಂಗ

ಪಾತ್ರವರ್ಗ:

ವಿಷ್ಣು
ಲಕ್ಷ್ಮೀ
ನಾರದ
ಅಜಮಿಳ
ವೇಶ್ಯೆ
ಯಮಧರ್ಮರಾಯ
ಚಿತ್ರಗುಪ್ತ
ಯಮದೂತರು – ಇಬ್ಬರು
ವಿಷ್ಣುದೂತರು – ಇಬ್ಬರು

ಒಟ್ಟು – ೧೧ ಮಂದಿ ಪಾತ್ರಧಾರಿಗಳು

ಪ್ರಕಟಿತ ಕೃತಿಗಳು

1.	ಅಮೃತವರ್ಷಿಣಿ	ಕವನ ಸಂಕಲನ
2.	ಧರೆಗಿಳಿದ ಧನ್ವಂತರಿ	ಭಕ್ತಿಗೀತೆಗಳು
3.	ಧರ್ಮವೀರ ಕೊಲ್ಯಶ್ರೀ	ಭಕ್ತಿಗೀತೆಗಳು
4.	ಶ್ರೀ ಗುರುಪ್ರಿಯ ಚರಣಾಮೃತ	ಭಜನೆಗಳು
5.	ಶ್ರೀ ಗುರುಪ್ರಿಯವಿಠಲ ಭಜನಾಮೃತ	ಭಜನೆಗಳು
6.	ಶ್ರೀ ಗುರುಪ್ರಿಯವಿಠಲ ನಾಮಾಮೃತ	ಭಜನೆಗಳು
7.	ಬಣ್ಣದ ಹಕ್ಕಿ ಬಾ.. ಬಾ...	ಶಿಶುಗೀತೆಗಳು
8.	ಧರೆಗಿಳಿದ ಧನ್ವಂತರಿ	ಕ್ಯಾಸೆಟ್‌ಗಳು
9.	ಹಳೇಕೋಟೆ ಅಮ್ಮ	ಕ್ಯಾಸೆಟ್‌ಗಳು
10.	ಶ್ರೀ ಹರಿದಾಸ ವಿಜಯ	ಹರಿದಾಸ ಸಾಹಿತ್ಯ ಗ್ರಂಥ (ದ್ವಿತೀಯ ಮುದ್ರಣ)
11.	ಸಿರಿಕೃಷ್ಣ ದೇವೆರೆ ಚಿಟ್ಕ್ದ ಕತೆ ಬೊಕ್ಕ ತುಳು ಕಬಿತೊಲು	ತುಳು ಕವನ ಸಂಕಲನ
12.	ಪೇಜಾವರ ಜ್ಞಾನದಾನಿ ಶ್ರೀ ಹರಿದಾಸ ಟಿ.ಯಲ್. ವಾಸುದೇವರಾಯರು	ಜೀವನಚರಿತ್ರೆ
13.	ಅಪರೂಪೊದ ಅಪರಂಜಿಲು	ತುಳು ಪೌರಾಣಿಕ ಕಥಾಸಂಕಲನ
14.	ಹಸಿರು ತೋರಣ	ಸಂಪ್ರದಾಯದ ಹಾಡುಗಳು
15.	ಗುರುದಕ್ಷಿಣೆ	ಪೌರಾಣಿಕ ಕಥಾಸಂಕಲನ
16.	ನಳ-ದಮಯಂತಿ	ಕಾವ್ಯಲಹರಿ
17.	ಹರಿದಾಸ ವೆಂಕಣ್ಣ ಕವಿ ಮೂಲ್ಕಿ	ಹರಿದಾಸ ಸಾಹಿತ್ಯ ಗ್ರಂಥ
18.	ಪೊಸತ್ತ್ ತುಳು ಭಕ್ತಿಗೀತೆಲು	ಕ್ಯಾಸೆಟ್‌ಗಳಿಂದ ಆಯ್ದ ತುಳು ಭಕ್ತಿಗೀತೆಗಳು
19.	ಶ್ರೀ ಹರಿದಾಸ ಕೀರ್ತನ ಮಂಜರಿ	ಹರಿಕಥಾ ಸಂಗ್ರಹ
20.	ತೌಳವ ದಾಸ ದರ್ಶನ	ಹರಿದಾಸ ಸಾಹಿತ್ಯ ಗ್ರಂಥ
21.	ಪಂಚ ಮುಖ್ಯಪ್ರಾಣ	ಕ್ಷೇತ್ರ ಪರಿಚಯ
22.	ತುಳುನಾಡ್ದ ಹರಿದಾಸೆರ್ ಬೊಕ್ಕ ತುಳು ಕೀರ್ತನೆಲು	ಹರಿದಾಸ ಸಾಹಿತ್ಯ ಗ್ರಂಥ (ತುಳು)
23.	ಭಕ್ತಿ ಗಂಗಾ ಲಹರಿ	ಭಕ್ತಿ ಗೀತೆಗಳ ಸಂಗ್ರಹ
24.	ಶ್ರೀಮಂತ ರಾಮಾಯಣ	ಕಾಲ್ಪನಿಕ ಪೌರಾಣಿಕ ಕಿರುಕಾದಂಬರಿ
25.	ಬದರೀ ಯಾತ್ರೆ - ಒಂದು ಅನುಭವ	ಪ್ರವಾಸ ಕಥನ
26.	ಶ್ರೀ ಶ್ರೀನಿವಾಸ ಕಲ್ಯಾಣ ಪದ್ಯಮಾಲಾ	ಪದ್ಯಮಾಲಿಕೆ
27.	ಶ್ರೀ ಹರಿಗುರುಸ್ತುತಿ ಮಣಿಮಾಲಾ	ಭಜನೆಗಳು
28.	ಶ್ರೀ ತುಳಸೀ ಮಹಿಮಾಮೃತ	ಹರಿದಾಸ ಸಾಹಿತ್ಯ ಗ್ರಂಥ
29.	ಶ್ರೀ ವೇಂಕಟೇಶ ಮಹಾತ್ಮೆ	ತುಳು ಪೌರಾಣಿಕ ಕಥೆ
30.	ಶ್ರೀ ಹರಿದಾಸ ಸೂಕ್ತಿ ಚಂದ್ರಿಕಾ	ಹರಿದಾಸ ಸಾಹಿತ್ಯ ಗ್ರಂಥ
31.	ಮಹಿಳಾ ಹರಿದಾಸ ದರ್ಪಣ	ಹರಿದಾಸ ಸಾಹಿತ್ಯ ಗ್ರಂಥ
32.	ದಾಸ ಸಾಹಿತ್ಯ ರಸ ರಂಜಿನಿ	ಹರಿದಾಸ ಸಾಹಿತ್ಯ ಗ್ರಂಥ
33.	ಅಜಮಿಳ ಮೋಕ್ಷ	ಯಕ್ಷಗಾನ ಪ್ರಸಂಗ

ಬೆನ್ನುಡಿ

ಶ್ರೀಮತಿ ಬಿ.ಕೆ. ಶ್ರೀಮತಿ ರಾವ್ ಇವರು ಮಹಿಳಾ ಹರಿದಾಸ ಪರಂಪರೆಯ ಕುರಿತು ಸಾಕಷ್ಟು ಪ್ರಮಾಣದಲ್ಲಿ ಮೌಲಿಕ ಕೃತಿಗಳನ್ನು ಬರೆದಿದ್ದಾರೆ. ಈ ಕ್ಷೇತ್ರದಲ್ಲಿ ಇವರ ಸಾಧನೆ ಅಭಿನಂದನೀಯ. ಇವರು ಈಚೆಗೆ ರಚಿಸಿದ **ಅಜಾಮಿಳ ಮೋಕ್ಷ** ಎಂಬ ಯಕ್ಷಗಾನ ಪ್ರಸಂಗ ಇವರ ವಿನೂತನ ಸಾಧನೆಯಾಗಿದೆ. ಯಕ್ಷಗಾನ ಪ್ರಸಂಗ ರಚನೆ ಸುಲಭ ವ್ಯವಸಾಯವಲ್ಲ. ಆದರೆ ಈ ಕವಯಿತ್ರಿ ಈ [illegible]ದಲ್ಲೂ ಯಶಸ್ವಿಯೆನಿಸಿದ್ದಾರೆ. ಪರಂಪರಾಗತ ಶೈಲಿಯಲ್ಲೆ ಪ್ರಸಂಗರ[illegible] ಮಾಡಿದ್ದಾರೆ. ಪೂರ್ವ ಪದ್ಧತಿಯಂತೆ ಆರಂಭದಲ್ಲಿ ವಿವಿಧ ಸ್ತುತಿ ಪದ್ಯಗಳು ಕ್ರಮಾಗತವಾಗಿ ಬಂದಿವೆ.

ಅಜಾಮಿಳನ ವೃತ್ತಾಂತವು ನಾರಾಯಣ ನಾಮ ಸ್ಮರಣೆಯ ಮಹತ್ವವನ್ನು ಸಾರುವ ಕಥನವಾಗಿದೆ. ಶ್ರೀಮತಿ ಬಿ.ಕೆ. ಶ್ರೀಮತಿಯವರು ಈ ಕಥಾನಕವನ್ನು ಸೊಗಸಾದ ಯಕ್ಷಗಾನ ಪ್ರಸಂಗವಾಗಿ ಬಿತ್ತರಿಸಿದ್ದಾರೆ. ಇವರಿಗೆ ಹಾರ್ದಿಕ ಅಭಿನಂದನೆಗಳು.

ವಂದನೆಗಳೊಂದಿಗೆ

ಡಾ। ಅಮೃತ ಸೋಮೇಶ್ವರ